**Office of the,**
**Joint Director**
**Local Audit circle, 4th Floor,T.T.M.C.Building, 'A' Block,B.M.T.C., Shanthinagar,**
**Bangalore-560027.**

ಕರ್ನಾಟಕ ಸರ್ಕಾರ
(ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ)

**ಜಂಟಿ ನಿರ್ದೇಶಕರ ಕಚೇರಿ**
**ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ**
**4ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ,**
**'ಎ' ಬ್ಲಾಕ್, ಬಿ.ಎಂ.ಟಿ.ಸಿ,**
**ಶಾಂತಿನಗರ,**
**ಬೆಂಗಳೂರು–27.**

---

**ಸಂಖ್ಯೆ:** ಸ್ಥಲೆಪವ:ಬೆಂ.ಕಾವಿ:2020–21 ದಿನಾಂಕ:

ಕಲ್ಯಾಣ ಆಯುಕ್ತರು,
ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ,
ಕಾರ್ಮಿಕ ಕಲ್ಯಾಣ ಭವನ ನಂ.48,
2ನೇ ಮಹಡಿ, ಮತ್ತಿಕೆರೆ ಮುಖ್ಯರಸ್ತೆ,
ಯಶವಂತಪುರ ಬೆಂಗಳೂರು–560022.

**ಮಾನ್ಯರೆ,**

**ವಿಷಯ:** 2019–20 ನೇ ಸಾಲಿನ ಲೆಕ್ಕ ತನಿಖಾ ವರದಿ ಕಳುಹಿಸುವ ಬಗ್ಗೆ.

*****

**ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ,** ಈ ಸಂಸ್ಥೆಯ 2019–20 ನೇ ಸಾಲಿನ ಲೆಕ್ಕ ತನಿಖೆಯು ಮುಗಿದಿದ್ದು, ಸದರಿ ಲೆಕ್ಕ ತನಿಖಾ ವರದಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ. ಹಾಗೂ ಈ ವರದಿಯ ಕಂಡಿಕೆಗಳಲ್ಲಿ ಗಮನಿಸಿರುವ ಲೋಪದೋಷಗಳು, ಆಕ್ಷೇಪಣೆಗಳು ಹಾಗೂ ವಸೂಲಾತಿ ಕಂಡಿಕೆಗಳ ಮೇಲೆ ಅಗತ್ಯ ಕ್ರಮ ತೆಗೆದುಕೊಂಡು ಅನುಸರಣಾ ವರದಿಯನ್ನು ಸೂಕ್ತ ಪ್ರಾಧಿಕಾರದ ಮೂಲಕ ಕೂಡಲೇ ಕಳುಹಿಸಿ ಕೊಡುವಂತೆ ಕೋರಲಾಗಿದೆ.

ತಮ್ಮ ವಿಶ್ವಾಸಿ,

ಜಂಟಿ ನಿರ್ದೇಶಕರು,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,
ಬೆಂಗಳೂರು.

ಪ್ರತಿಯನ್ನು

1. ಮಾನ್ಯ ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ. ಬೆಂಗಳೂರು. ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ. ಪ್ರಾಂತೀಯ ಕಛೇರಿ ಬೆಂಗಳೂರು, ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಚೇರಿ ಪ್ರತಿ.
4. ಹೆಚ್ಚುವರಿ ಪ್ರತಿ.

**ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ 2019-20ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದ ಪ್ರಮುಖ ನ್ಯೂನತೆಗಳು ಹಾಗೂ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತಗಳ ವಿವರಗಳು.**

| ಕ್ರ. ಸಂ | ಕಂಡಿಕೆ ಸಂಖ್ಯೆ | ಪ್ರಮುಖ ನ್ಯೂನತೆಗಳು | ಆಕ್ಷೇಪಣಾ ಮೊತ್ತ | ವಸೂಲಾತಿ ಮೊತ್ತ |
|---|---|---|---|---|
| 1 | 2 | 3 | 4 | 5 |
| 1 | 5 | ನಿಶ್ಚಿತ ಠೇವಣಿಗಳ ಹೂಡಿಕೆ ಪತ್ರಗಳ ಭೌತಿಕ ಪರಿಶೀಲನೆಯಲ್ಲಿನ ನ್ಯೂನತೆಗಳು. | 828200000 | - |
| 2 | 6 | ಹಿಂದಿನ ಸಾಲುಗಳ ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಸರಣಾ ವರದಿ ಸಲ್ಲಿಸುವ ಬಗ್ಗೆ | - | - |
| 3 | 7 | ಆಯವ್ಯಯ ಸಿದ್ಧಪಡಿಸುವಿಕೆಯಲ್ಲಿ ಕಂಡುಬಂದ ನ್ಯೂನತೆಗಳು | - | - |
| 4 | 12 | ವಾರ್ಷಿಕ ಲೆಕ್ಕಪತ್ರಗಳಲ್ಲಿ ಕಂಡುಬಂದ ನ್ಯೂನತೆಗಳು | - | - |
| 5 | 13 | ವಾರ್ಷಿಕ ಆಡಳಿತ ವರದಿ. | - | - |
| 6 | 14 | ವರ್ಗೀಕೃತ ಜಮಾ ಮತ್ತು ಖರ್ಚಿನ ವಹಿ ಹಾಗೂ ತಃಖ್ತೆಗಳ ಕುರಿತು. | - | - |
| 7 | 15 | ಕರ್ನಾಟಕ ರಾಜ್ಯ ಕಾರ್ಮಿಕ ಅಧ್ಯಯನ ಸಂಸ್ಥೆಗೆ ಐ.ಇ.ಸಿಗಾಗಿ ಹಣ ನೀಡಿದ್ದು ಉಪಯುಕ್ತತಾ ಪ್ರಮಾಣ ಪತ್ರ ಹಾಗೂ ಲೆಕ್ಕಪತ್ರಗಳನ್ನು ಪಡೆಯದಿರುವುದು: | 10000000 | - |
| 8 | 16 | ಕರ್ನಾಟಕ ರಾಜ್ಯ ಕಾರ್ಮಿಕ ಮಂಡಳಿಯಲ್ಲಿ ದೈನಂದಿನ ಕಾರ್ಯಚಟುವಟಿಕೆಗಳನ್ನು (ವಂತಿಕೆ ಸಂಗ್ರಹ, ವಿದ್ಯಾರ್ಥಿ ವೇತನ ನೀಡಿಕೆ ಮತ್ತು ಸಮಾಂಭಗಳ ಆಯೋಜನೆ) ಗಣಕೀಕರಿಸಲು ಸಾಫ್ಟ್‌ವೇರ್ ಖರೀದಿಸಿದ್ದು, ಈ ಖರೀದಿಯಲ್ಲಿ ಕಂಡುಬಂದ ನ್ಯೂನತೆಗಳು. | 2855700 | - |
| 9 | 17 | ಕರ್ನಾಟಕ ರಾಜ್ಯ ಕಾರ್ಮಿಕ ಅಧ್ಯಯನ ಸಂಸ್ಥೆಯ ನೂತನ ಕಟ್ಟಡ ಉದ್ಘಾಟನೆಗೆ ಭರಿಸಿರುವ ವೆಚ್ಚದಲ್ಲಿ ಕಂಡುಬಂದ ನ್ಯೂನತೆಗಳು | 1197730 | - |
| 10 | 18 | ವಂತಿಕೆ ಹಣ ಸಂಗ್ರಹದಲ್ಲಿ ಕಂಡುಬಂದ ನ್ಯೂನತೆಗಳು | - | - |
| 11 | 19 | ಕಾನೂನು ಶಾಸ್ತ್ರಗಳಿಗೆ ಸಂಬಂಧಿಸಿದ ಪುಸ್ತಕಗಳ ಖರೀದಿಯಲ್ಲಿ ಕಂಡುಬಂದ ನ್ಯೂನತೆಗಳು. | 946685 | |
| 12 | 20 | ಬೆಂಗಳೂರು ನಗರದ ಬಾಗಲುಕುಂಟೆಯಲ್ಲಿ ಸಭಾಭವನ ನಿರ್ಮಾಣ ಕಾಮಗಾರಿಯಲ್ಲಿ ಕಂಡುಬಂದ ನ್ಯೂನತೆಗಳು | 1750000 | |
| 13 | 21 | ನಿಶ್ಚಿತ ಠೇವಣಿಯ ಮೇಲೆ ನಿಗಧಿತ ಬಡ್ಡಿ ಮೊತ್ತಕ್ಕಿಂತ ಕಡಿಮೆ ಪಡೆದಿರುವುದು. | 0 | 29769 |
| 14 | 22 | ಉದ್ಯೋಗ ಸಂಸ್ಥೆಗಳು ಕಾರ್ಮಿಕರಿಗೆ ನೀಡಬೇಕಾದ ಮೊತ್ತ ಕಾರಣಾಂತರಗಳಿಂದ ಅನ್‌ಕ್ಲೆಮ್ ಆಗಿ ಉಳಿದು ಬಂದ ಮೊತ್ತ ವಸೂಲಿಸದಿರುವುದು. | 0 | 29420 |
| 15 | 23 | ವಂತಿಕೆ ಹಣವನ್ನು ಚೆಕ್ ಮೂಲಕ ಸಂಗ್ರಿಹಿಸಿದ್ದು, ಈ ಸಂಬಂಧ ತಿರಸ್ಕೃತ ಚೆಕ್‌ಗಳ ಮೊತ್ತವನ್ನು ವಸೂಲಿಸದಿರುವುದು. | 0 | 306097 |
| 16 | 24 | ಕಾರ್ಮಿಕ ಕಲ್ಯಾಣ ಮಂಡಳಿಯಿಂದ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ನೀಡಿದ ಚೆಕ್‌ಗಳು ನಗದೀಕರಣವಾಗದಿರುವುದು. | 5451876 | 0 |
| 17 | 26 | ನಿಶ್ಚಿತ ಠೇವಣಿ ಹೂಡಿಕೆಗಳ ವಿವರ | 0 | 0 |

| | | | | |
|---|---|---|---|---|
| 18 | 27 | 2019–20ನೇ ಸಾಲಿನಲ್ಲಿ ಬಾಡಿಗೆ ವಸೂಲಿಯಲ್ಲಿ ಕಂಡುಬಂದ ನ್ಯೂನತೆಗಳು. | 0 | 198941 |
| 19 | 28 | ನಿಧಿಯನ್ನು ನಿಹಿತಗೊಳಿಸುವುದು ಮತ್ತು ಅದರ ವಿನಿಯೋಗ. | – | – |
| 20 | 29 | ಕಾರ್ಮಿಕರು ಮತ್ತು ಕಾರ್ಮಿಕರ ಅವಲಂಭಿತರಿಗೆ ನೀಡಿರುವ ವಿವಿಧ ಯೋಜನೆಗಳ ವಿವರ. | – | – |
| 21 | 31 | ಹಬ್ಬದ ಮುಂಗಡದ ವಿವರ. | – | – |
| 22 | 32 | ಪಿಂಚಣಿ ವಂತಿಗೆಯ ವಿವರ. | – | – |
| 23 | 33 | ಚರ ಮತ್ತು ಸ್ಥಿರಾಸ್ತಿ ವಹಿ ಕುರಿತು. | – | – |
| 24 | 35 | ಸೇವಾ ಪುಸ್ತಕದಲ್ಲಿ ಕಂಡುಬಂದ ನ್ಯೂನತೆಗಳು | – | – |
| 25 | 37 | ಅನ್ಯ ಕಾರ್ಯ ನಿಮಿತ್ತ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಮಂಡಳಿಯ ನೌಕರರ ಸೇವೆ ಕುರಿತು. | – | – |
| 26 | 38 | ಕ್ರೀಡಾ ಚಟುವಟಿಕೆಗಳಿಗೆ ಧನ ಸಹಾಯ ನೀಡಿಕೆಯಲ್ಲಿ ಕಂಡುಬಂದ ನ್ಯೂನತೆಗಳು. | – | – |
| 27 | 39 | ಕಾರ್ಮಿಕ ಕಲ್ಯಾಣ ಮಂಡಳಿಯು, ಉದ್ದೇಶ ಹಾಗೂ ಯೋಜನೆಗಳ ಅನುಷ್ಠಾನದಲ್ಲಿ ಸುಧಾರಣೆಗೊಳಿಸುವ ಕುರಿತು. | – | – |
| | | **ಒಟ್ಟು ರೂ.** | **850401991** | **564227** |

ಉಪನಿರ್ದೇಶಕರು,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,
ಬೆಂಗಳೂರು.

# ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ 2019-20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.

## ಭಾಗ-1

**1. ಪ್ರಸ್ತಾವನೆ :-**

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ 2019-20ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು 1968ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ನಿಯಮಗಳ ನಿಯಮ 5ರ ಪ್ರಕಾರ ಕೈಗೊಂಡಿದೆ.

ಮಂಡಳಿಯು ವಿವಿಧ ಕಾರ್ಯ ಚಟುವಟಿಕೆಗಳಾದ ವಿದ್ಯಾರ್ಥಿ ವೇತನ, ವೈದ್ಯಕೀಯ ನೆರವು, ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ, ವಾರ್ಷಿಕ ಕ್ರೀಡಾ ಚಟುವಟಿಕೆ ಹಮ್ಮಿಕೊಳ್ಳುವ ನೋಂದಾಯಿತ ಕಾರ್ಮಿಕ ಸಂಘಗಳಿಗೆ ಧನ ಸಹಾಯ, ವಾರ್ಷಿಕ ವೈದ್ಯಕೀಯ ತಪಾಸಣೆ ನಡೆಸುವ ಟ್ರೇಡ್ ಯೂನಿಯನ್ ಸಂಸ್ಥೆಗಳಿಗೆ ಧನಸಹಾಯ, ಸಮುದಾಯದ ಅವಶ್ಯಕತೆಗಳು ಹಾಗೂ ಇತ್ಯಾದಿ ಸಾಮಾಜಿಕ ಸ್ವರೂಪದ ಸಮುದಾಯ ಚಟುವಟಿಕೆಗಳನ್ನು ನಿರ್ವಹಿಸುವ ಉದ್ದೇಶವನ್ನು ಹೊಂದಿರುತ್ತದೆ.

ಪ್ರಸ್ತುತ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಪ್ರಮುಖ ನ್ಯೂನತೆಗಳನ್ನು ಕಂಡಿಕೆವಾರು ಪ್ರಸ್ತಾಪಿಸಲಾಗಿದ್ದು, ನಿಯಮ 5(1)ರ ಪ್ರಕಾರ ವರದಿ ತಲುಪಿದ ಮೂರು ತಿಂಗಳೊಳಗಾಗಿ ಕಂಡಿಕೆವಾರು ಉತ್ತರಗಳನ್ನು ಸಕ್ಷಮ ಪ್ರಾಧಿಕಾರದ ಶಿಫಾರಸ್ಸಿನೊಂದಿಗೆ ಈ ಕಚೇರಿಗೆ ಸಲ್ಲಿಸಲು ಸೂಚಿಸಿದೆ.

**2. ಲೆಕ್ಕ ಪರಿಶೋಧನಾ ತಂಡದ ವಿವರಗಳು :-**

| | | |
|---|---|---|
| 1 | ಲೆಕ್ಕ ಪರಿಶೋಧಕರು | ಶ್ರೀ ಎಸ್.ಶಶಿಶೇಖರ್, ಲೆ.ಪ.ಅ<br>ಶ್ರೀ ಎಲ್.ಕೆ. ಮಂಜುನಾಥ್, ಲೆ.ಪ |
| 2 | ಲೆಕ್ಕ ಪರಿಶೋಧನಾ ಅವಧಿ | 2019-20 |
| 3 | ಲೆಕ್ಕ ತನಿಖೆಯ ಪ್ರಾರಂಭ ದಿನಾಂಕ | 15.02.2021 |
| 4 | ಲೆಕ್ಕ ತನಿಖಾ ಮುಕ್ತಾಯ ದಿನಾಂಕ | 16.03.2021 |
| 5 | ಉಪಯೋಗಿಸಿದ ಮಾನವ ದಿನಗಳು | 30 ಏಕ ಮಾನವ ದಿನಗಳು |
| 6 | ಕರಡು ವರದಿಯ ಪುನರ್ ಪರಿಶೀಲನಾ ಅಧಿಕಾರಿ | ಶ್ರೀ ಎಸ್.ಭೀಮರಾಯ<br>ಉಪನಿರ್ದೇಶಕರು |
| 7 | ಪುನರ್ ಪರಿಶೀಲನಾ ದಿನಾಂಕ | |

**3. ಸಂಸ್ಥೆಯ ಆಡಳಿತ ವರ್ಗದ ವಿವರಗಳು :-**

| ಕ್ರ.ಸಂ | ಪದನಾಮ | ಹೆಸರು (ಶ್ರೀಮತಿ/ಶ್ರೀಯುತರು) | ದಿನಾಂಕ | |
|---|---|---|---|---|
| | | | ಯಿಂದ | ವರೆಗೆ |
| 1 | ಅಧ್ಯಕ್ಷರು | ಶ್ರೀ ಅರಬೈಲ್ ಶಿವರಾಮ ಹೆಬ್ಬಾರ ಮಾನ್ಯ ಕಾರ್ಮಿಕ ಸಚಿವರು ಹಾಗೂ ಅಧ್ಯಕ್ಷರು ಕಾರ್ಮಿಕ ಕಲ್ಯಾಣ ಮಂಡಳಿ | 01.04.2019 | 31.03.2020 |
| 2 | ಆಯುಕ್ತರು | ಡಾ\|\|ಜಿ. ಮಂಜುನಾಥ್ | 01.04.2019 | 31.03.2020 |
| 3 | ಲೆಕ್ಕಾಧಿಕಾರಿಗಳು | ಶ್ರೀ ವಿ ನಾಗೇಶ್ | 17.01.2020 | 31.03.2020 |

| | | | | |
|---|---|---|---|---|
| 4 | ಕಛೇರಿ ಅಧೀಕ್ಷಕರು | ಶ್ರೀ ರಂಗಸ್ವಾಮಿ. ಎಲ್ | 01.04.2019 | 31.03.2020 |
| 5 | ನಗದು ಗುಮಾಸ್ತರು | ಶ್ರೀಮತಿ ಸುಜಾತ ಜೆ ಭಟ್ | 01.04.2019 | 31.03.2020 |
| 6 | ಯೋಜನೆ ನಿರ್ದೇಶಕರು | ಶ್ರೀ ಎ. ಬಸವರಾಜು<br>ಶ್ರೀ ಸಂಪತ್ ಕುಮಾರ್<br>ಶ್ರೀಮತಿ ಪ್ರೇಮಕುಮಾರಿ | 01.04.2019<br>01.04.2019<br>01.04.2019 | 31.03.2020<br>31.03.2020<br>31.03.2020 |
| 7 | ವಿಷಯ ನಿರ್ವಾಹಕರು | ಶ್ರೀ ಜಗದೀಶ್.ಎಸ್<br>ಶ್ರೀ ತೀರ್ಥಲಿಂಗಯ್ಯ<br>ಶ್ರೀ ಪಂಚಲಿಂಗಪ್ಪ<br>ಶ್ರೀ. ಎನ್. ಶಿವಲಿಂಗಯ್ಯ<br>ಶ್ರೀ ಬಿ.ಎನ್. ನಾಗರಾಜು<br>ಶ್ರೀ ಡಿ. ಯಶವಂತ್<br>ಶ್ರೀಮತಿ ಬಿ. ನಿಶ್ಮಿತ<br>ಶ್ರೀ ಜೆ.ಎಸ್. ರವಿಶಂಕರ್<br>ಶ್ರೀ ಎಂ.ಡಿ ರಾಠೋಡ್<br>ಶ್ರೀ ಬಿ.ಕೆ ವಿಶ್ವನಾಥ್<br>ಶ್ರೀ ರಮೇಶ್.ಟಿ | 01.04.2019<br>01.04.2019<br>01.04.2019<br>01.04.2019<br>01.04.2019<br>01.04.2019<br>01.04.2019<br>01.04.2019<br>01.04.2019<br>01.04.2019<br>01.04.2019 | 31.03.2020<br>31.03.2020<br>31.03.2020<br>30.09.2019<br>31.03.2020<br>31.03.2020<br>31.03.2020<br>31.03.2020<br>31.03.2020<br>31.03.2020<br>31.03.2020 |

## ಭಾಗ-2

**4. ಭೌತಿಕ ಪರಿಶೀಲನೆ ಕುರಿತು ;-**

ದಿನಾಂಕ: 15.02.2021 ರಂದು ಕಚೇರಿಯ ವಿವಿಧ ಶಿಲ್ಕುಗಳನ್ನು ಭೌತಿಕವಾಗಿ ಪರಿಶೀಲಿಸಲಾಗಿ ಈ ಕೆಳಕಂಡಂತೆ ಶಿಲ್ಕುಗಳು ಇದ್ದು, ಆಖೈರು ಶಿಲ್ಕುಗಳಿಗೆ ತಾಳೆ ಇರುತ್ತದೆ.

| | | | | |
|---|---|---|---|---|
| 1. | ಕೈ ನಗದು ಶಿಲ್ಕು | ರೂ.2137/- | | |
| 2. | ಅಂಚೆ ಚೀಟಿಗಳು | ಇರುವುದಿಲ್ಲ | | |
| 3. | ರಸೀದಿ ಪುಸ್ತಕಗಳು | | 6278 ರಿಂದ 6300<br>6751 ರಿಂದ 6800 | 23 ಪುಸ್ತಕ<br>50 ಪುಸ್ತಕ |
| | | | ಒಟ್ಟು | 73 ಪುಸ್ತಕ |
| 4. | ಹೂಡಿಕೆ ಪತ್ರಗಳು. | ಹೂಡಿಕೆ ಪತ್ರಗಳ ಸಂಖ್ಯೆ 68. ಒಟ್ಟು ಹೂಡಿಕೆ ಮೊತ್ತ ರೂ.1302200000/- ಅನುಬಂಧ-01 ರಲ್ಲಿ ಲಗತ್ತಿಸಿದೆ. | | |
| 5. | ಫ್ರ್ಯಾಂಕಿಂಗ್ ಮೆಷೀನ್ ಸ್ಟ್ಯಾಂಪ್ ಮುಕ್ತಾಯ ಮೌಲ್ಯ | ರೂ.8845/- | | |

**5. ನಿಶ್ಚಿತ ಠೇವಣಿಗಳ ಹೂಡಿಕೆ ಪತ್ರಗಳ ಭೌತಿಕ ಪರಿಶೀಲನೆಯಲ್ಲಿ ಕಂಡುಬಂದ ನ್ಯೂನತೆಗಳು:-**

2019-20ನೇ ಸಾಲಿನ ಲೆಕ್ಕ ತನಿಖೆಯನ್ನು ದಿನಾಂಕ: 15.02.2019ರಂದು ಪ್ರಾರಂಭಿಸಿದ್ದು, ಅಂದು ಪರಿಶೀಲನೆಗೆ ಹಾಜರುಪಡಿಸಿದ ನಿಶ್ಚಿತ ಠೇವಣಿಗಳ ಪತ್ರಗಳನ್ನು ಭೌತಿಕವಾಗಿ ಪರಿಶೀಲಿಸಿದೆ. ಒಟ್ಟು ಹೂಡಿಕೆ ಪತ್ರಗಳ ಸಂಖ್ಯೆ: 68 ಹೂಡಿಕೆ ಮೌಲ್ಯ ರೂ. 1302200000/- ಪರಿಪಕ್ವ ಮೊತ್ತ ರೂ. 1377376779/- ಗಳಾಗಿರುತ್ತದೆ. ವಿವರಗಳನ್ನು

ಅನುಬಂಧ-01 ನೀಡಿ ವರದಿಗೆ ಲಗತ್ತಿಸಿದೆ. ಈ ಪೈಕಿ ರೂ. 474000000/- ಗಳಿಗೆ ಬ್ಯಾಂಕ್‌ನ ಹೂಡಿಕೆ ಪತ್ರಗಳ ಶಿಲ್ಕಿನ ದೃಢೀಕರಣ ಒದಗಿಸಲಾಗಿದೆ. ರೂ. 828200000/- ಗಳ ಹೂಡಿಕೆ ಪತ್ರಗಳಿಗೆ ಬ್ಯಾಂಕ್‌ನಿಂದ ಹೂಡಿಕೆ ಶಿಲ್ಕಿನ ದೃಢೀಕರಣ (Bank Deposit balance confirmation report) ಒದಗಿಸಿರುವುದಿಲ್ಲ. ಆದುದರಿಂದ ಸದರಿ ಮೊತ್ತ ರೂ. 828200000/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಬ್ಯಾಂಕ್‌ವಾರು ಹೂಡಿಕೆ ಪತ್ರಗಳ ಮೊತ್ತದ ವಿವರ ಇಂತಿದೆ.

| | |
|---|---|
| UCO Bank | 99500000 |
| Union Bank | 131700000 |
| Canara Bank | 398000000 |
| Bank of Idia | 199000000 |
| ಒಟ್ಟು | 828200000 |

**6. ಹಿಂದಿನ ಸಾಲುಗಳ ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಸರಣಾ ವರದಿ ಸಲ್ಲಿಸುವ ಬಗ್ಗೆ:-**

ಸದರಿ ಸಂಸ್ಥೆಯ ಹಿಂದಿನ ಸಾಲುಗಳ ಲೆಕ್ಕ ಪರಿಶೋಧನಾ ವರದಿಗಳಿಗೆ ಒಂದು ಮಿನಿಟ್ ಪುಸ್ತಕ ತೆರೆದು, ಅನುಸರಣಾ ವರದಿಗಳನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದ ಮುಖೇನ ಈ ಕಚೇರಿಗೆ ಸಲ್ಲಿಸಬೇಕಾಗಿದೆ. ಆದರೆ ಸದರಿ ಮಿನಿಟ್ ಪುಸ್ತಕ ನಿರ್ವಹಿಸಿ ಲೆಕ್ಕ ತನಿಖೆಗೆ ಹಾಜರುಪಡಿಸಿರುವುದಿಲ್ಲ. ಇದು ಒಂದು ಮೂಲ ದಾಖಲೆಯಾಗಿದ್ದು, ಲೆಕ್ಕ ತನಿಖಾ ವರದಿಗಳ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ನಿಗಾವಣೆಗೆ ಅತಿ ಮುಖ್ಯವಾಗಿದೆ. ಆದುದರಿಂದ ತಕ್ಷಣ ಅಗತ್ಯ ಕ್ರಮವಹಿಸಿ ಲೆಕ್ಕಪರಿಶೋಧನಾ ವರದಿಗಳಿಗೆ ಅನುಪಾಲನಾ ವರದಿ ಸಲ್ಲಿಸಲು ಕ್ರಮ ಕೈಗೊಳ್ಳಲು ಸೂಚಿಸಿದೆ. ವಿಳಂಬವಾದಲ್ಲಿ ಅಧಿಕಾರಿಗಳು ಮತ್ತು ನೌಕರರ ವರ್ಗಾವಣೆ, ನಿವೃತ್ತಿ ಮರಣ ಹಾಗೂ ಕಾನೂನಾತ್ಮಕ ತೊಡಕುಗಳಿಂದಾಗಿ ಲೆಕ್ಕಪರಿಶೋಧನೆಯಲ್ಲಿ ಸೂಚಿಸಿರುವ ವಸೂಲಾತಿ ಮೊತ್ತಗಳು ವಸೂಲಾಗದೆ ಮಂಡಳಿಗೆ ಆರ್ಥಿಕ ನಷ್ಟವುಂಟಾಗುವ ಸಂಭವವಿರುತ್ತದೆ.

ದಿನಾಂಕ: 31.03.2020ರ ಅಂತ್ಯಕ್ಕೆ ತೀರುವಳಿಯಾಗದೇ ಬಾಕಿ ಉಳಿದಿರುವ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ವಿವರಗಳು.

| ಕ್ರ. ಸಂ | ವರ್ಷ | ಕಂಡಿಕೆ ಸಂ: | ಆಕ್ಷೇಪಣೆ ಮೊತ್ತ | ಕಂಡಿಕೆ ಸಂ: | ವಸೂಲಾತಿ ಮೊತ್ತ | ಪ್ರಸಕ್ತ ಸಾಲಿನಲ್ಲಿ ತೀರುವಳಿ | | ಬಾಕಿ | |
|---|---|---|---|---|---|---|---|---|---|
| | | | | | | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
| 1. | 1993-1994 | 0 | 5334 | - | 880356 | - | - | 5334 | 880356 |
| 2. | 1994-1995 | 0 | 1855056 | - | 0 | - | - | 1855056 | 0 |
| 3. | 1995-1996 | 0 | 0 | - | 0 | - | - | 0 | 0 |
| 4. | 1996-1997 | 0 | 0 | - | 0 | - | - | 0 | 0 |
| 5. | 1997-1999 | 0 | 686000 | - | 0 | - | - | 686000 | 0 |
| 6. | 1999-2001 | 4 | 2862573 | - | 0 | - | - | 2862573 | 0 |
| 7. | 2001-2002 | 4 | 2010339 | 1 | 42486 | - | - | 2010339 | 42486 |
| 8. | 2002-2003 | 4 | 430742 | 1 | 3517 | - | - | 430742 | 3517 |
| 9. | 2003-2005 | 2 | 32006 | | 0 | - | - | 32006 | 0 |
| 10. | 2005-2006 | 0 | 0 | | 0 | - | - | 0 | 0 |
| 11. | 2006-2007 | 0 | 0 | - | 739 | - | - | 0 | 739 |
| 12. | 2007-2008 | 4 | 1517610 | 1 | 6360 | - | - | 1517610 | 6360 |
| 13. | 2008-2009 | 5 | 818073 | 1 | 12727 | - | - | 818073 | 12727 |
| 14. | 2009-2011 | 7 | 7092344 | 1 | 7655 | - | - | 7092344 | 7655 |
| 15. | 2011-2013 | 3 | 1733504 | - | _ | - | - | 1733504 | 0 |
| 16. | 2013-2014 | 6 | 421440 | 3 | 1161005 | - | - | 421440 | 1161005 |

| | | | | | | | | | |
|---|---|---|---|---|---|---|---|---|---|
| 17. | 2014-2017 | 7 | 55997799 | 3 | 1149544 | - | - | 55997799 | 1149544 |
| 18. | 2018-19 | 02 | 14115000 | 03 | 2032784 | - | - | 14115000 | 2032784 |
| | **ಒಟ್ಟು** | **48** | **8957782 0** | **14** | **5297173** | - | - | **89577820** | **5297173** |

**ಘೋಷ್ವಾರೆ:-**

| ಕ್ರ.ಸಂ | ವರ್ಷ | ಆಕ್ಷೇಪಣೆ | | ವಸೂಲಾತಿ | |
|---|---|---|---|---|---|
| | | ಕಂಡಿಕೆ | ಮೊತ್ತ | ಕಂಡಿಕೆ | ಮೊತ್ತ |
| 1. | 01.04.2020ಕ್ಕೆ ಪ್ರಾರಂಭ ಶಿಲ್ಕು | 48 | 89577820 | 14 | 5297173 |
| 2. | 2019-20ರ ಸೇರ್ಪಡೆ | 07 | 850401991 | 04 | 564227 |
| 3. | ಒಟ್ಟು | 55 | 939979811 | 18 | 5861400 |
| 4. | 2019-20 ರ ವರೆಗೆ ತೀರುವಳಿ | - | - | - | - |
| 5. | 31.03.2020ಕ್ಕೆ ಅಂತಿಮ ಶಿಲ್ಕು | 55 | 939979811 | 18 | 5861400 |

ಮೇಲಿನ ಲೆಕ್ಕತನಿಖಾ ವರದಿಗಳ ಕೆಲವು ಆಯ್ದಾ ಕಂಡಿಕೆಗಳಿಗೆ ಅನುಪಾಲನಾ ವರದಿ ಸಲ್ಲಿಸಿದೆ. ಅಂತಿಮ ಪರಿಶೀಲನೆ ಕೈಗೊಳ್ಳಬೇಕಾಗಿದೆ.

**7. ಆಯ-ವ್ಯಯ ಸಿದ್ಧಪಡಿಸುವಿಕೆಯಲ್ಲಿ ಕಂಡುಬಂದ ನ್ಯೂನತೆಗಳು :-**

1968ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ನಿಯಮಗಳ ನಿಯಮ 6ರ ಪ್ರಕಾರ ಪ್ರತಿಯೊಂದು ಹಣಕಾಸು ವರ್ಷಕ್ಕಾಗಿ ಬಜೆಟ್ ಅಂದಾಜುಗಳನ್ನು ತಯಾರಿಸಬೇಕು ಮತ್ತು ಅವುಗಳನ್ನು ಹಿಂದಿನ ವರ್ಷದ ಡಿಸೆಂಬರ್ ಮೊದಲನೇ ದಿವಸದಂದು ಅಥವಾ ಅದಕ್ಕೆ ಮುಂಚೆ ಮಂಡಳಿಯ ಮುಂದೆ ಇಡತಕ್ಕದ್ದು, ಮಂಡಳಿಯು ಅದನ್ನು ಅನುಮೋದಿಸಿದ ನಂತರ ಡಿಸೆಂಬರ್ 15 ರಂದು ಅಥವಾ ಅದಕ್ಕೆ ಮುಂಚೆ ಸರ್ಕಾರದ ಅನುಮೋದನೆಗಾಗಿ ಕಳುಹಿಸಬೇಕು ರಾಜ್ಯ ಸರ್ಕಾರವು ಜನವರಿ 15ಕ್ಕೆ ಮುಂಚೆ ಅನುಮೋದಿಸಬೇಕಾಗಿರುತ್ತದೆ.

2019-20ನೇ ಸಾಲಿನ ಆಯ-ವ್ಯಯವನ್ನು ಮಂಡಳಿಯ 89ನೇ ಸಭೆಯಲ್ಲಿ ದಿನಾಂಕ: 07.06.2019ರಂದು ಅನುಮೋದಿಸಿರುವುದು ಕಂಡುಬಂದಿರುತ್ತದೆ. ಸದರಿ ಆಯ-ವ್ಯಯವನ್ನು ಸರ್ಕಾರವು 26.07.2019ರಂದು ಅನುಮೋದಿಸಿದ್ದು, ಅನೊಮೋದಿತ ಆಯ-ವ್ಯಯದ ವಿವರ ಈ ಕೆಳಕಂಡಂತಿದೆ. ವಿವರಗಳನ್ನು ಅನುಬಂಧ- 02 ರಲ್ಲಿ ನೀಡಿ ವರದಿಗೆ ಲಗತ್ತಿಸಿದೆ. ಆಯವ್ಯಯವನ್ನು ನಿಗಧಿತ ಅವಧಿಯಲ್ಲಿ ಅನುಮೋದಿಸದೆ ವಿಳಂಭವಾಗಿ ಅನುಮೋದಿಸಿರುವುದು ಕಂಡುಬಂದಿದೆ. ಇನ್ನುಮುಂದೆ ವಿಳಂಭಕ್ಕೆ ಅವಕಾಶ ಮಾಡಿಕೊಡದೆ ಸಕಾಲದಲ್ಲಿ ಆಯವ್ಯಯಕ್ಕೆ ಅನುಮೋದನೆ ಪಡೆದುಕೊಳ್ಳಲು ಸೂಚಿಸಿದೆ. ನಿರೀಕ್ಷಿತ ಹಾಗೂ ವಾಸ್ತವಿಕ ಆಯವ್ಯಯಕ್ಕೆ ಬಹಳಷ್ಟು ವ್ಯತ್ಯಾಸವಿದ್ದು ನಿಖರ ಅಂಕಿ ಅಂಶಗಳನ್ನು ಪರಿಗಣಿಸಿ ಆಯವ್ಯಯ ಸಿದ್ದಪಡಿಸಲು ಕ್ರಮವಹಿಸಬೇಕೆಂದು ಲೆಕ್ಕತನಿಖೆಯಲ್ಲಿ ಅಭಿಪ್ರಾಯಿಸಿದೆ.

**ವಿವರ:-**

| **2019-20 ನೇ ಸಾಲಿಗೆ ಆಯವ್ಯಯ** | ನಿರೀಕ್ಷಿತ | ವಾಸ್ತವಿಕ |
|---|---|---|
| ಆದಾಯ | 393569615 | 387687473 |
| ವೆಚ್ಚ | 314281646 | 139929363 |
| ವ್ಯತ್ಯಾಸ | 79287969 | 247758110 |

**೮. ಮಂಡಳಿಯ ಆರ್ಥಿಕ ಪರಿಸ್ಥಿತಿ;-**

ಕರ್ನಾಟಕ ರಾಜ್ಯ ಕಾರ್ಮಿಕ ಕಲ್ಯಾಣ ಮಂಡಳಿಯ 2019-20ನೇ ಸಾಲಿನ ಆರ್ಥಿಕ ವಹಿವಾಟನ್ನು ಎಸ್.ಬಿ.ಐ ಮತ್ತು ಕೆನರಾ ಬ್ಯಾಂಕ್‌ಗಳಲ್ಲಿ ನಡೆಸಿದ್ದು ಆರ್ಥಿಕ ಪರಿಸ್ಥಿತಿ ಈ ಕೆಳಕಂಡಂತಿದೆ.

**2019-20ನೇ ಸಾಲಿನ ಆರ್ಥಿಕ ಪರಿಸ್ಥಿತಿ**

| | |
|---|---|
| ದಿನಾಂಕ 1.4.2019ಕ್ಕೆ ಪ್ರಾ.ಶಿಲ್ಕು | 29397152 |
| 2019-20ನೇ ಸಾಲಿಗೆ ಸ್ವೀಕೃತಿ | 1527861515 |
| **ಒಟ್ಟು ರೂ.** | 1557258667 |
| 2019-20ನೇ ಸಾಲಿಗೆ ವೆಚ್ಚ | 1235710448 |
| 31.3.2020ಕ್ಕೆ ನಗದು ಪುಸ್ತಕದ ಪ್ರಕಾರ ಅಖೈರು ಶಿಲ್ಕು | 321548219 |
| 31.03.2020ಕ್ಕೆ ಬ್ಯಾಂಕ್ ಪ್ರಕಾರ ಅಖೈರು ಶಿಲ್ಕು | 321586325 |
| ವ್ಯತ್ಯಾಸ | 38106 |

**ಸದರಿ ವ್ಯತ್ಯಾಸದ ಮೊತ್ತ ರೂ. ೩೮೧೦೬/- ಗಳು ನಗದೀಕರಣವಾಗದ ಚೆಕ್‌ಗಳ ಮೊತ್ತವಾಗಿದೆ. ಖಾತೆವಾರು ವಿವರಗಳನ್ನು ಅನುಬಂಧ-೦೩ ರಲ್ಲಿ ನೀಡಿ ವರದಿಗೆ ಲಗತ್ತಿಸಿದೆ.**

**೯. ರಸೀದಿ ಪುಸ್ತಕಗಳ ಉಪಯೋಗದ ಕುರಿತು:-**

2019-20ನೇ ಸಾಲುಗಳ ವರೆಗೆ ಸಾಮಾನ್ಯ ರಸೀದಿ ಪುಸ್ತಕಗಳನ್ನು ಉಪಯೋಗಿಸಲಾಗಿದ್ದು ವಿವರ ಈ ಕೆಳಕಂಡಂತೆ ಇರುತ್ತದೆ.

| ರಸೀದಿ ಪುಸ್ತಕ ಸಂ ಇಂದ | ರಸೀದಿ ಪುಸ್ತಕ ಸಂ ವರಗೆ | ರಸೀದಿ ಸಂ ಇಂದ | ರಸೀದಿ ಸಂ ವರಗೆ | ಸಾಲು |
|---|---|---|---|---|
| 6273 | - | 627237 (07.12.2018) | 627238 ರಿಂದ 627300 (ಖಾಲಿ ಇರುತ್ತದೆ) | - |
| 6276 | - | 627525 | 627600 | 2019-20ಕ್ಕೆ ಪೂರ್ಣ |
| 6277 | - | 627601 | 627606 20.03.2020 | 2019-20ರ ಭಾಗಶಃ |

**ಸಾಮಾನ್ಯ ರಶೀದಿ ಪುಸ್ತಕಗಳ ವ್ಯವಹಾರ:-**

2019-20ನೇ ಸಾಲಿನ ಸಾಮಾನ್ಯ ರಶೀದಿ ಪುಸ್ತಕಗಳ ವ್ಯವಹಾರವು ಈ ಕೆಳಕಂಡಂತಿರುತ್ತದೆ.

**ವಿವರ:**

| | |
|---|---|
| 1.4.2019ಕ್ಕೆ ಪ್ರಾರಂಭದ ಉಳಿಕೆ | 74 |
| 2019-20ನೇ ಸಾಲಿಗೆ ಸ್ವೀಕೃತಿ | 0 |
| ಒಟ್ಟು | 74 |
| 2019-20ನೇ ಸಾಲಿಗೆ ಉಪಯೋಗ | 01 |
| 31.03.2020ರ ಅಂತ್ಯಕ್ಕೆ ಬಾಕಿ | 73 |

**ಅಂತಿಮ ಬಾಕಿಗೆ ವಿವರ:-**

1. ರಶೀದಿ ಪುಸ್ತಕಗಳ ಸಂಖ್ಯೆ: 6278 ರಿಂದ 6300 = 23
   ರಸೀದಿ ಸಂಖ್ಯೆ: 627701 ರಿಂದ 630000
2. ರಸೀದಿ ಪುಸ್ತಕಗಳ ಸಂಖ್ಯೆ: 6751 – 6800 = 50
   ರಸೀದಿ ಸಂಖ್ಯೆ: 675001- 680000

**ಒಟ್ಟು = 73**

**10. ಅನುದಾನಗಳ ವಹಿ :-**

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ನಿಯಮಾನುಸಾರ ನಿಗಧಿತ ವಹಿಗಳಲ್ಲಿ ಮತ್ತು ನಮೂನೆಗಳಲ್ಲಿ ಅನುದಾನದ ವಿವರಗಳನ್ನು 2019-20ನೇ ಸಾಲಿನವರೆಗೆ ವರ್ಷವಾರು ನಿರ್ವಹಿಸಿರುವುದಿಲ್ಲ. ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನ (ವಂತಿಕೆ) ವಿವರಗಳನ್ನು ವರ್ಷವಾರು ಸಿದ್ದಪಡಿಸಿ ಹಾಜರುಪಡಿಸಿರುವುದಿಲ್ಲ. ಬ್ಯಾಂಕ್ ವ್ಯವಹಾರದ ಆಧಾರದಲ್ಲಿ ಸಿದ್ದಪಡಿಸಿ ದೃಢೀಕರಿಸಿ ನೀಡಿರುವಂತೆ ಅನುದಾನದ ವಿವರ ಈ ಕೆಳಕಂಡಂತಿರುತ್ತದೆ.

**2019-20ನೇ ಸಾಲಿನ ಅನುದಾನದ (ವಂತಿಕೆ) ವಿವರ**

| | |
|---|---:|
| ದಿ: 1.4.19ಕ್ಕೆ ಪ್ರಾರಂಭಿಕ ಶಿಲ್ಕು : | 46700000 |
| 2019-20ನೇ ಸಾಲಿನ ಬೇಡಿಕೆ : | 82600000 |
| ಒಟ್ಟು: | 129300000 |
| 2019-20ನೇ ಸಾಲನಲ್ಲಿ ಬಿಡುಗಡೆ | 71800000 |
| ದಿ: 31.3.20ಕ್ಕೆ ಬಾಕಿ : | 57500000 |

**11. ಸಾಲಗಳ ವಹಿ :-**

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ 2019-20ನೇ ಸಾಲಿನಲ್ಲಿ ಯಾವುದೇ ಸಾಲಗಳ ವಹಿವಾಟು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುವುದಿಲ್ಲ.

**12. ವಾರ್ಷಿಕ ಲೆಕ್ಕಪತ್ರಗಳಲ್ಲಿ ಕಂಡುಬಂದ ನ್ಯೂನತೆಗಳು:-**

ಕಾರ್ಮಿಕ ಕಲ್ಯಾಣ ನಿಧಿ ನಿಯಮಗಳು 1968ರ ನಿಯಮ 5(3) ರನ್ವಯ ಮಂಡಳಿಯ ವಾರ್ಷಿಕ ಲೆಕ್ಕಪತ್ರಗಳನ್ನು ಆರ್ಥಿಕ ವರ್ಷದ ಮುಕ್ತಾಯದ ತರುವಾಯ ಬರುವ ಜೂನ್-15 ರೊಳಗೆ ಅಥವಾ ಅದಕ್ಕೆ ಮುಂಚೆ ಪರಿಶೀಲನೆಗಾಗಿ ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಇವರಿಂದ ಅಧಿಕೃತಗೊಳಿಸಿದ ಅಧಿಕಾರಿಯಾದ ಜಂಟಿ ನಿರ್ದೇಶಕರು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಚೇರಿ ಬೆಂಗಳೂರು ರವರಿಗೆ ಕಳುಹಿಸಬೇಕಾಗಿದೆ. ವಾರ್ಷಿಕ ಲೆಕ್ಕಪತ್ರಗಳು ಸಾಮಾನ್ಯ ಸಭೆಯಲ್ಲಿ ಅನುಮೋದನೆಗೊಂಡ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ. ಆದರೆ ಲೆಕ್ಕಪರಿಶೋಧನಾ ಸಮಯದಲ್ಲಿ ಹಾಜರುಪಡಿಸಲಾಗಿದೆ. ಲೆಕ್ಕಪತ್ರಗಳನ್ನು ಪರಿಶೀಲಿಸಲಾಗಿ ಬ್ಯಾಂಕ್ ಪಾಸ್ ಶೀಟ್‌ಗಳಲ್ಲಿ ಉಧೃತವಾದ ಯತಾವತ್ ದಾಖಲೆಗಳ ಮೇಲೆ ಲೆಕ್ಕಪತ್ರ ಸಿದ್ದಪಡಿಸಿರುವುದು ಕಂಡುಬಂದಿದೆ. ವ್ಯಾಪಗತವಾದ ಚೆಕ್ಕಗಳ ಬದಲಾಗಿ ನೀಡಿದ ಬದಲಿ ಚೆಕ್‌ಗಳ ಹಿಂದಿನ ವರ್ಷದ ಜಮೆ ಮತ್ತು ಖರ್ಚುಗಳನ್ನು ಸಹ ಪರಿಗಣಿಸಿರುವುದು ಕಂಡುಬಂದಿದೆ. ಲೆಕ್ಕಪತ್ರಗಳನ್ನು ಸಿದ್ದಪಡಿಸುವಾಗ ಸಮತೋಲನಾ ಪಟ್ಟಿಯಲ್ಲಿ ಸ್ಥಿರಾಸ್ತಿಗಳಿಗೆ ಸವಕಳಿ ಮತ್ತು ಮೌಲ್ಯಮಾಪನ ಮಾಡಿ ದೃಢೀಕರಿಸಿದ ದಾಖಲೆಗಳ ಆಧಾರದ ಮೇಲೆ ಸಿದ್ದಪಡಿಸಬೇಕಾಗಿದ್ದು, ಸದರಿ ನಿಯಮಗಳನ್ನು ಅನುಸರಿಸಿರುವುದಿಲ್ಲ. ಈ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಿಕೊಂಡು ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ದಪಡಿಸಲು ಕ್ರಮವಹಿಸಬೇಕೆಂದು ಲೆಕ್ಕತನಿಖೆಯಲ್ಲಿ ಅಭಿಪ್ರಾಯಿಸಿದೆ. ಲೆಕ್ಕಪತ್ರಗಳ ವಿವರಗಳನ್ನು ಅನುಬಂಧ-4 ರಲ್ಲಿ ನೀಡಿ ವರದಿಗೆ ಲಗತ್ತಿಸಿದೆ.

**13. ವಾರ್ಷಿಕ ಆಡಳಿತ ವರದಿ :-**

ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ನಿಯಮಗಳು 1968ರ ನಿಯಮ 28ರ ಪ್ರಕಾರ ಮಂಡಳಿಯು ಪ್ರತಿ ಹಣಕಾಸು ವರ್ಷವು ಮುಕ್ತಾಯವಾದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಆ ವರ್ಷದಲ್ಲಿನ ಚಟುವಟಿಕೆಗಳ ವಿವರಗಳನ್ನೊಳಗೊಂಡ ವಾರ್ಷಿಕ ವರದಿಯೊಂದಿಗೆ ಜಮೆಗಳು ಮತ್ತು ವೆಚ್ಚಗಳ ವಿವರಣಾ ಪತ್ರವನ್ನು ರಾಜ್ಯ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಬೇಕು. ಕಾರ್ಮಿಕ ಕಲ್ಯಾಣ ನಿಧಿ ನಿಯಮಗಳು, 1968 ನಿಯಮ 5 ರನ್ವಯ ಮಂಡಳಿಯು ಸಂಪೂರ್ಣ ಮತ್ತು ಸ್ಪಷ್ಟ ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರತಕ್ಕದ್ದು, (ಕರ್ನಾಟಕ ಆರ್ಥಿಕ ಸಂಹಿತೆಯಲ್ಲಿ ನಿರ್ಧಿಷ್ಟಪಡಿಸಿರುವಂತೆಯೇ ಇರತಕ್ಕದ್ದು) ಲೆಕ್ಕಪತ್ರಗಳನ್ನು ಪ್ರತಿ ವರ್ಷ ಮಾರ್ಚ್ 31 ರಂದು ಸರಿದೂಗಿಸತಕ್ಕದ್ದು. ಮಂಡಳಿಯು ಸಿದ್ಧಪಡಿಸಿರುವ ವಾರ್ಷಿಕ ವರದಿ ಪ್ರತಿಯನ್ನು ಅನುಬಂಧ-5 ರಲ್ಲಿ ನೀಡಿ ವರದಿಗೆ ಲಗತ್ತಿಸಿದೆ. ವಾಸ್ತವವಾಗಿ ಮಂಡಳಿ ಅನುಮೋದಿಸಿದ ನಡವಳಿ ಹಾಗೂ ಸರ್ಕಾರ ಅನುಮೋದಿಸಿದ ಪತ್ರದ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.

**14. ವರ್ಗೀಕೃತ ಜಮಾ ಮತ್ತು ಖರ್ಚಿನ ವಹಿ ಹಾಗೂ ತಃಖ್ತೆಗಳ ಕುರಿತು.**

2019-20ನೇ ಸಾಲಿನಲ್ಲಿ ಕಾರ್ಮಿಕ ಕಲ್ಯಾಣ ಮಂಡಳಿಯ ವರ್ಗೀಕೃತ ಜಮಾ ಮತ್ತು ಖರ್ಚಿನ ವಿವರಗಳನ್ನೊಳಗೊಂಡ ವಹಿಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿದ್ದು. ವಾರ್ಷಿಕ ವರ್ಗೀಕೃತ ಜಮಾ ಖರ್ಚಿನ ವಿವರಗಳನ್ನು ನಿಗಧಿತ ನಮೂನೆಯಲ್ಲಿ ನಿರ್ವಹಿಸಿರುವುದಿಲ್ಲ. ಲೆಕ್ಕ ತನಿಖೆಗೆ ಹಾಜರುಪಡಿಸಿದಂತೆ ವಾರ್ಷಿಕ ವರ್ಗೀಕೃತ ಜಮಾ ಖರ್ಚುಗಳ ವಿವರಣಾ ತಃಖ್ತೆಗಳನ್ನು ಅನುಬಂಧ-6 ರಲ್ಲಿ ನೀಡಿ ವರದಿಗೆ ಲಗತ್ತಿಸಿದೆ.

## ಭಾಗ-3

**15. ಕರ್ನಾಟಕ ರಾಜ್ಯ ಕಾರ್ಮಿಕ ಅಧ್ಯಯನ ಸಂಸ್ಥೆಗೆ ಐ.ಇ.ಸಿ ಚಟುವಟಿಕೆಗಾಗಿ ಹಣ ನೀಡಿದ್ದು ಉಪಯುಕ್ತತಾ ಪ್ರಮಾಣ ಪತ್ರ ಹಾಗೂ ಲೆಕ್ಕಪತ್ರಗಳನ್ನು ಪಡೆಯದಿರುವುದು:**

2019-20ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಕಾರ್ಮಿಕ ಅಧ್ಯಯನ ಸಂಸ್ಥೆಗೆ ಚೆಕ್ ಸಂಖ್ಯೆ: 571611 ದಿನಾಂಕ: 13.02.2020 ರಂದು ರೂ.10,000,000/- ಗಳನ್ನು ಐ.ಇ.ಸಿ ಚಟುವಟಿಕೆಗಳಿಗಾಗಿ (Information, Education and communication) ನೀಡಿದೆ. ಈ ಸಂಬಂಧ ಉಪಯುಕ್ತತಾ ಪ್ರಮಾಣ ಪತ್ರ ಹಾಗೂ ಲೆಕ್ಕಪತ್ರಗಳನ್ನು ಹಾಜರುಪಡಿಸುವಂತೆ ಕೋರಿ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ: 06/2020-21 ದಿನಾಂಕ: 03.03.2021 ನ್ನು ಜಾರಿಗೊಳಿಸಲಾಗಿದೆ. ಆದರೆ ಉಪಯುಕ್ತತಾ ಪ್ರಮಾಣ ಪತ್ರ ಹಾಗೂ ಲೆಕ್ಕಪತ್ರಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಆದುದರಿಂದ ಉಪಯುಕ್ತತಾ ಪ್ರಮಾಣ ಪತ್ರ ಹಾಗೂ ಲೆಕ್ಕಪತ್ರಗಳನ್ನು ಹಾಜರುಪಡಿಸುವವರೆಗೆ ಈ ಸಂಬಂಧ ಪಾವತಿಸಿರುವ ಒಟ್ಟು ಮೊತ್ತ ರೂ. 10,000,000/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**16. ಕರ್ನಾಟಕ ರಾಜ್ಯ ಕಾರ್ಮಿಕ ಮಂಡಳಿಯಲ್ಲಿ ದೈನಂದಿನ ಕಾರ್ಯಚಟುವಟಿಕೆಗಳನ್ನು (ವಂತಿಕೆ ಸಂಗ್ರಹ, ವಿದ್ಯಾರ್ಥಿ ವೇತನ ನೀಡಿಕೆ ಮತ್ತು ಸಮಾಂಭಗಳ ಆಯೋಜನೆ) ಗಣಕೀಕರಿಸಲು ಸಾಫ್ಟ್‌ವೇರ್ ಖರೀದಿಸಿದ್ದು, ಈ ಖರೀದಿಯಲ್ಲಿ ಕಂಡುಬಂದ ನ್ಯೂನತೆಗಳು:**

2019-20ನೇ ಸಾಲಿನಲ್ಲಿ ಮಂಡಳಿಯ ಕಛೇರಿಯನ್ನು ಗಣಕೀಕರಿಸಲು ಮೆ॥ ಮೆಟಾಫೋರ್ ಇಫೋ ಸಿಸ್ಟಂ ಇವರಿಗೆ ಚೆಕ್ ಸಂಖ್ಯೆ: 741874 ದಿನಾಂಕ: 08.11.2019 ರೂ.2855700/- ಗಳನ್ನು ಪಾವತಿಸಿದೆ. ಈ ಪಾವತಿಯಲ್ಲಿ ಈ ಕೆಳಕಂಡ ನ್ಯೂನತೆಯನ್ನು ಗುರುತಿಸಿದೆ.

1. ಸಾಫ್ಟ್‌ವೇರ್ ಅಭಿವೃದ್ಧಿಗಾಗಿ ಮೆ॥ ಎನ್.ಐ.ಸಿ ಇವರಿಗೆ ಕೋರಿಕೆ ಸಲ್ಲಿಸಿ ಸೇವೆ ಒದಗಿಸುವಂತೆ ಯಾವುದೇ ಪತ್ರ ವ್ಯವಹಾರ ಮಾಡಿರುವುದಿಲ್ಲ. ಎನ್.ಐ.ಸಿ ಯಲ್ಲಿ ಸರ್ಕಾರಿ ಕಛೇರಿಗಳಿಗೆ ಸಾಫ್ಟ್‌ವೇರ್ ಅಭಿವೃದ್ಧಿಗಾಗಿ ಉಚಿತ ಮಾರ್ಗದರ್ಶನ ನೀಡಲಾಗುತ್ತದೆ.
2. ಗಣಕೀಕರಣ ಸಂಬಂಧ ಅವಶ್ಯವಿರುವ KB, MB, GB and TB ಗಳ ನಿರ್ಧಾರವನ್ನು ತಾಂತ್ರಿಕ ತಜ್ಞರ ಸಹಮತದೊಂದಿಗೆ ನಿರ್ಧರಿಸಿದ ವಿವರಗಳು ಲಭ್ಯವಿರುವುದಿಲ್ಲ.
3. ಕಾರ್ಯದೇಶಕ್ಕೂ ಮುನ್ನ ಒಪ್ಪಂದ ಪತ್ರದಲ್ಲಿ ಮೇಲಿನ ಅಂಶಗಳನ್ನು ಪ್ರಸ್ತಾಪಿಸಿರುವ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ.
4. ಗಣಕೀಕರಣ ಪೂರ್ಣಗೊಂಡ ಹಾಗೂ ಸಮರ್ಥವಾಗಿ ಅನುಷ್ಠಾನಗೊಳಿಸಿರುವ ಕುರಿತು ಯಾವುದೇ ತಾಂತ್ರಿಕ ತಜ್ಞರ ದೃಢೀಕರಣ ಪಡೆದುಕೊಂಡ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ.

ಈ ಮೇಲಿನ ಅಂಶಗಳಿಗೆ ಮಾಹಿತಿ ಒದಗಿಸುವಂತೆ ಕೋರಿ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ: 05/2020–21 ದಿನಾಂಕ: 03.03.2021 ನ್ನು ಜಾರಿಗೊಳಿಸಿದಾಗ್ಯೂ ಯಾವುದೇ ಮಾಹಿತಿ ಒದಗಿಸಿರುವುದಿಲ್ಲ. ಆದುದರಿಂದ ಮೆ॥ ಮೆಟಾಫೋರ್ ಇಫೋ ಸಿಸ್ಟಂ ಇವರಿಗೆ ಪಾವತಿಸಿರುವ ಮೊತ್ತ ರೂ.2855700/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**17. ಕರ್ನಾಟಕ ರಾಜ್ಯ ಕಾರ್ಮಿಕ ಅಧ್ಯಯನ ಸಂಸ್ಥೆಯ ನೂತನ ಕಟ್ಟಡ ಉದ್ಘಾಟನೆಗೆ ಭರಿಸಿರುವ ವೆಚ್ಚದಲ್ಲಿ ಕಂಡುಬಂದ ನ್ಯೂನತೆಗಳು:**

ಕರ್ನಾಟಕ ರಾಜ್ಯ ಕಾರ್ಮಿಕ ಅಧ್ಯಯನ ಸಂಸ್ಥೆಯ ನೂತನ ಕಟ್ಟಡ ಉದ್ಘಾಟನೆಗಾಗಿ ಕಾರ್ಯಕ್ರಮ ಆಯೋಜಿಸಲು ಮೆ॥ ಎಂ.ಸಿ.ಎ (Marketing Consulting Agency) ಇವರು ರೂ.6642879/– ಗಳ ಅಂದಾಜು ಮೊತ್ತದ ಅವಶ್ಯಕತೆ ಇದೆ ಎಂದು ಕಾರ್ಮಿಕ ಕಲ್ಯಾಣ ಮಂಡಳಿಯು ಶಿಫಾರಸ್ಸು ಮಾಡಿದೆ. ಆದರೆ ಸರ್ಕಾರವು ಅಧಿಸೂಚನೆ ಸಂಖ್ಯೆ: ಆಇ:717 ವೆಚ್ಚ–12/19 ರಲ್ಲಿ ಕೆ.ಟಿ.ಪಿ.ಪಿ. ಕಾಯ್ದೆ 1999ರ ಪ್ರಕರಣ 4(ಜಿ) ಪ್ರಕಾರ ವಿನಾಯಿತಿ ನೀಡಿ ರೂ.4000000/– ಗಳಿಗೆ ಅನುಮತಿ ನೀಡಿದೆ. ಈ ಮೊತ್ತದಲ್ಲಿ ಕಾರ್ಮಿಕ ಕಲ್ಯಾಣ ಮಂಡಳಿಯು 1/3 ನೇ ಭಾಗ ಮೊತ್ತವನ್ನು ಭರಿಸಲು ಅವಕಾಶ ಕಲ್ಪಿಸಿದೆ. ವಾಸ್ತವವಾಗಿ ಮೆ॥ ಎಂ.ಸಿ.ಎ (Marketing Consulting Agency) ಇವರಿಗೆ ಕಾರ್ಮಿಕ ಕಲ್ಯಾಣ ಮಂಡಳಿ ವತಿಯಿಂದ ಚೆಕ್ ಸಂಖ್ಯೆ: 884578 ದಿನಾಂಕ: 03.08.2019 ರೂ.1289597/– ಮತ್ತು ಚೆಕ್ ಸಂಖ್ಯೆ: 5716638 ದಿನಾಂಕ: 02.03.2020 ರೂ.1241466/– ಒಟ್ಟು ರೂ.2531063/– ಗಳನ್ನು ಪಾವತಿಸಲಾಗಿದೆ. ಈ ಸಂಬಂಧ ಮೆ॥ ಎಂ.ಸಿ.ಎ (Marketing Consulting Agency) ಇವರು ರೂ.7853247/– ಗಳ ಮೊತ್ತದ ಅಂತಿಮ ಬಿಲ್ ಸಲ್ಲಿಸಿದ ಆಧಾರದ ಮೇಲೆ ಕಾರ್ಮಿಕ ಕಲ್ಯಾಣ ಮಂಡಳಿ ವತಿಯಿಂದ 1/3 ನೇ ಭಾಗದಷ್ಟು ಮೊತ್ತವಾಗಿ ಪಾವತಿಸಿದೆ. ವಾಸ್ತವವಾಗಿ ಸರ್ಕಾರದಿಂದ ಮಂಜೂರಾದ ಮೊತ್ತ ರೂ.4000000/–ಗಳನ್ನು ಪರಿಗಣಿಸಿ ರೂ.1333333/– ಗಳನ್ನು ಪಾವತಿಸಲು ಕ್ರಮಕೈಗೊಳ್ಳಬೇಕಾಗಿರುತ್ತದೆ. ಹೆಚ್ಚುವರಿ ಮೊತ್ತಕ್ಕೆ ಸರ್ಕಾರದ ಅನುಮತಿಯನ್ನು ಪಡೆದಿರುವುದಿಲ್ಲ. ಮೆ॥ ಎಂ.ಸಿ.ಎ (Marketing Consulting Agency) ಇವರ ಪರಿಷ್ಕೃತ ಅಂದಾಜಿಗೆ ಸರ್ಕಾರದ ಅನುಮೋದನೆ ಪಡೆದು ಪಾವತಿಸಲು ಕ್ರಮಕೈಗೊಳ್ಳಬೇಕಾಗಿರುತ್ತದೆ. ಈ ಕ್ರಮ ಅನುಸರಿಸದೆ ದಿನಾಂಕ: 11.12.2020 ರಂದು ನಡೆದ ಕಾರ್ಮಿಕ ಕಲ್ಯಾಣ ಮಂಡಳಿಯ 90ನೇ ಸಭೆಯ ನಿರ್ಣಯದಲ್ಲಿ ಹೆಚ್ಚುವರಿ ಮೊತ್ತಕ್ಕೆ ಅನುಮೋದನೆ ನೀಡಿ, ಅದರಂತೆ ನೇರವಾಗಿ ಮೆ॥ ಎಂ.ಸಿ.ಎ (Marketing Consulting Agency) ಇವರು ಸಲ್ಲಿಸಿದ ಬಿಲ್‌ಗಳ ಮೊತ್ತ ರೂ.7853247/– ಗಳನ್ನು ಒಪ್ಪಿ, ಈ ಮೊತ್ತಕ್ಕೆ 1/3 ನೇ ಭಾಗ ಮೊತ್ತ ರೂ.2531063/– ಗಳನ್ನು ಪಾವತಿಸಲಾಗಿದೆ. ಈ ಕುರಿತು ಮೇಲಿನ ಎಲ್ಲಾ ಅಂಶಗಳಿಗೆ ಸಮಂಜಸ ಮಾಹಿತಿ ಒದಗಿಸುವಂತೆ ಕೋರಿ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ: 02/2020–21 ದಿನಾಂಕ: 16.02.2021 ನ್ನು ಜಾರಿಗೊಳಿಸಲಾಗಿದೆ. ಕಲ್ಯಾಣ ಮಂಡಳಿಯಿಂದ ಸಮರ್ಥನೀಯ ಅನುಪಾಲನೆ ನೀಡಿರುವುದಿಲ್ಲ. ಸರ್ಕಾರದಿಂದ ಘಟನೋತ್ತರ ಮಂಜೂರಾತಿ (ಕೆ.ಟಿ.ಪಿ.ಪಿ ಕಾಯ್ದೆ ಪ್ರಕರಣ 4ಜಿ) ಪಡೆದು ಲೆಕ್ಕಪರಿಶೋಧನೆಗೆ ಒದಗಿಸುವವರೆಗೆ ಹೆಚ್ಚುವರಿ ಪಾವತಿ ಮೊತ್ತ ರೂ. 1197730/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**18. ವಂತಿಕೆ ಹಣ ಸಂಗ್ರಹದಲ್ಲಿ ಕಂಡುಬಂದ ನ್ಯೂನತೆಗಳು:**

ಕಾರ್ಮಿಕ ಕಲ್ಯಾಣ ಮಂಡಳಿಯ ಅಧಿನಿಯಮ 1965 ಪ್ರಕರಣ 7(ಕ) ಅನ್ವಯ ಕಾರ್ಮಿಕ ಸಂಸ್ಥೆ, ಕಾರ್ಮಿಕ ಮತ್ತು ಸರ್ಕಾರದಿಂದ ಅನುಮೋದಿತ ಅನುಪಾತ 1:2:1 ರನ್ವಯ 1 ಘಟಕ ರೂ.20/- ರಂತೆ ವಂತಿಕೆ ಸಂಗ್ರಹಿಸಬೇಕಾಗಿರುತ್ತದೆ. 2019-20ನೇ ಸಾಲಿನಲ್ಲಿ ಕಾರ್ಮಿಕ ಇಲಾಖೆ ಮತ್ತು ಕಾರ್ಖಾನೆ ಮತ್ತು ಬಾಯ್ಲರ್ ಇಲಾಖೆ ಅಂಕಿ ಅಂಶಗಳ ಪ್ರಕಾರ ನೋಂದಾಯಿತ ಒಟ್ಟು ಕಾರ್ಯ ಸಂಸ್ಥೆಗಳು 25615 ಈ ಪೈಕಿ 18140 ಸಂಸ್ಥೆಗಳು ವಂತಿಕೆ ಹಣ ಪಾವತಿಸಿವೆ. ಉಳಿಕೆ 7475 ಸಂಸ್ಥೆಗಳು ನಿಯಮ ಪ್ರಕಾರ ಯಾವುದೇ ವಂತಿಕೆಯನ್ನು ನೀಡಿರುವುದಿಲ್ಲ. ಆದರೆ ಮಂಡಳಿಯು ಕೇವಲ 472 ಸಂಸ್ಥೆಗಳಿಗೆ ವಂತಿಕೆ ಪಾವತಿಸುವಂತೆ ಪತ್ರ ವ್ಯವಹಾರ ನಡೆಸಿದೆ. ಉಳಿದ 7003 ಸಂಸ್ಥೆಗಳ ವಂತಿಕೆ ಸಂಗ್ರಹ ಸಂಬಂಧ ಯಾವುದೇ ಕ್ರಮಗಳನ್ನು ಕೈಗೊಂಡಿರುವುದಿಲ್ಲ. ಇದು ಸಂಸ್ಥೆ ಹೊಂದಿರುವ ಧೇಯೋದ್ದೇಶಗಳ ಸಾಧನೆಗೆ ಆರ್ಥಿಕ ಮುಗ್ಗಟ್ಟನ್ನು ಉಂಟುಮಾಡುತ್ತದೆಂದು ಲೆಕ್ಕ ತನಿಖೆಯಲ್ಲಿ ಅಭಿಪ್ರಾಯಿಸಿದೆ. ಸಂಸ್ಥೆಯ ಕಾರ್ಯ ಚಟುವಟಿಕೆಗಳಿಗೆ ಹಣ ಸಂಗ್ರಹಣೆಯೇ ಮೊದಲ ಆಧ್ಯತೆಯಾಗಿರುತ್ತದೆ. ಮೂಲ ಉದ್ದೇಶವನ್ನೇ ಸಂಸ್ಥೆ ಪರಿಗಣಿಸದಿರುವುದು ಕಂಡುಬಂದಿದೆ. ಆದುದರಿಂದ ತಕ್ಷಣ ಬಾಕಿ ಸಂಸ್ಥೆಗಳಿಂದ ವಂತಿಕೆ ಸಂಗ್ರಹಿಸಿ, ಸಂಸ್ಥೆ ಹೊಂದಿರುವ ಕಾರ್ಯ ಚಟುವಟಿಕೆಗಳನ್ನು ಸಮರ್ಥವಾಗಿ ಅನುಷ್ಠಾನಗೊಳಿಸಲು ಕ್ರಮವಹಿಸಲು ಸೂಚಿಸಿದೆ. ವಂತಿಕೆಗಳ ಸಂಗ್ರಹದ ವಿವರ ಈ ಕೆಳಕಂಡಂತಿರುತ್ತದೆ.

2019-20ನೇ ಸಾಲಿಗೆ ಸಂಸ್ಥೆಗಳಿಂದ ಸಂಗ್ರಹಿಸಿದ ವಂತಿಕೆ ವಿವರ

| | |
|---|---|
| ಪ್ರಾರಂಭಿಕ ಶಿಲ್ಕು | 30499920 |
| ಬೇಡಿಕೆ | 264596220 |
| ಒಟ್ಟು | 295096140 |
| ಸಂಗ್ರಹ | 247863780 |
| ಬಾಕಿ | 47232360 |

2019-20ನೇ ಸಾಲಿಗೆ ಸರ್ಕಾರದಿಂದ ಬಿಡುಗಡೆಗೊಳಿಸಿದ ವಂತಿಕೆ ವಿವರ

| | |
|---|---|
| ಪ್ರಾರಂಭಿಕ ಶಿಲ್ಕು | 46700000 |
| ಬೇಡಿಕೆ | 82600000 |
| ಒಟ್ಟು | 129300000 |
| ಬಿಡುಗಡೆ | 71800000 |
| ಬಾಕಿ | 57500000 |

ಸಂಸ್ಥೆಗಳಿಂದ ಬರಬೇಕಾದ ಬಾಕಿ ವಂತಿಕೆ ಮೊತ್ತ ರೂ. 47232360/- ಗಳು ಹಾಗು ಸರ್ಕಾರದಿಂದ ಬರಬೇಕಾದ ಬಾಕಿ ವಂತಿಕೆ ಮೊತ್ತ ರೂ. 57500000/- ಗಳು, ಒಟ್ಟು ಮೊತ್ತ ರೂ.104732360/- ಗಳನ್ನು ಸಂಗ್ರಹಿಸಲು ಮಂಡಳಿಯು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.

**19. ಕಾನೂನು ಶಾಸ್ತ್ರಗಳಿಗೆ ಸಂಬಂಧಿಸಿದ ಪುಸ್ತಕಗಳ ಖರೀದಿಯಲ್ಲಿ ಕಂಡುಬಂದ ನ್ಯೂನತೆಗಳು**
**ಪಾವತಿ ವಿವರ**

| ಕ್ರ.ಸಂ | ಪುಸ್ತಕದ ಶೀರ್ಷಿಕೆ | ಪಬ್ಲಿಷರ್ಸ್ / ಸರಬರಾಜುದಾರರು | ಚೆಕ್ ಸಂ/ ದಿನಾಂಕ | ಮೊತ್ತ |
|---|---|---|---|---|
| 1 (1) | ಸುಪ್ರಿಂಕೋರ್ಟ್ ಕೇಸ್‌ಗಳ ವಿವರ (1960 ರಿಂದ 2019 ರವರೆಗೆ) | ಮೆ॥ ಪುಲಾನಿ ಮತ್ತು ಪುಲಾನಿ | 741733 26.08.2019 | |
| (2) | ಕರ್ನಾಟಕ 'ಲಾ' ಜರ್ನಲ್ (1923 ರಿಂದ 2018 ರವರೆಗೆ) | ಮೆ॥ ಪುಲಾನಿ ಮತ್ತು ಪುಲಾನಿ | 741733 26.08.2019 | 848270 |

| | | | | |
|---|---|---|---|---|
| (3) | ಸುಪ್ರಿಂಕೋರ್ಟ ಕೇಸ್ ಡೈಜೆಸ್ಟ್ (1950 ರಿಂದ 23.08.2019 ರವರೆಗೆ) | ಮೆ॥ ಪುಲಾನಿ ಮತ್ತು ಪುಲಾನಿ | 741733 26.08.2019 | |
| 2 (1) | ಭಾರತೀಯ ಸಂವಿಧಾನ | ಮೆ॥ ಪುಲಾನಿ ಮತ್ತು ಪುಲಾನಿ | 741734 26.08.2019 | 19710 |
| (2) | ಕನಿಷ್ಟ ವೇತನ ಕಾಯ್ದೆ 1971 | ಮೆ॥ ಪುಲಾನಿ ಮತ್ತು ಪುಲಾನಿ | 741734 26.08.2019 | |
| (3) | 'ಲಾ' ಆಫ್ ಲೀಜ್ | ಮೆ॥ ಪುಲಾನಿ ಮತ್ತು ಪುಲಾನಿ | 741734 26.08.2019 | |
| (4) | ಸೋಸಿಯಲ್ ಎರಾಸ್‌ಮೆಂಟ್ ಹ್ಯಾಂಡ್ ಬುಕ್ | ಮೆ॥ ಪುಲಾನಿ ಮತ್ತು ಪುಲಾನಿ | 741734 26.08.2019 | |
| (5) | ಸುಪ್ರಿಂಕೋರ್ಟ ಆನ್‌ಲೈನ್ ಸರ್ವಿಸಸ್ 'ಲಾ' | ಮೆ॥ ಪುಲಾನಿ ಮತ್ತು ಪುಲಾನಿ | 741734 26.08.2019 | |
| (6) | ಸಿಂಪಲ್ ವೇ ಆಫ್ ಡ್ರಾಫ್ಟಿಂಗ್ | ಮೆ॥ ಪುಲಾನಿ ಮತ್ತು ಪುಲಾನಿ | 741734 26.08.2019 | |
| (7) | ವೇಜರ್ ಲೇಬಲ್ 'ಲಾ' | ಮೆ॥ ಪುಲಾನಿ ಮತ್ತು ಪುಲಾನಿ | 741734 26.08.2019 | |
| (8) | ಬೇಸಿಕ್ಸ್ ಆಫ್ ಲೇಬರ್ 'ಲಾ' | ಮೆ॥ ಪುಲಾನಿ ಮತ್ತು ಪುಲಾನಿ | 741734 26.08.2019 | |
| (9) | ಲೇಬರ್‌ಲಾಸ್ | ಮೆ॥ ಪುಲಾನಿ ಮತ್ತು ಪುಲಾನಿ | 741734 26.08.2019 | |
| 3 (1) | 'ಲಾ' ಜರ್ನಲ್ ಮತ್ತು ಡೈಜೆಸ್ಟ್‌ಗಳು | ಮೆ॥ ಕರ್ನಾಟಕ 'ಲಾ' ಜರ್ನಲ್ ಪಬ್ಲಿಕೇಶನ್ಸ್ | 741735 26.08.2019 | 78705 |
| | | | **ಒಟ್ಟು ಮೊತ್ತ** | **946685** |

ಮೇಲಿನ ಖರೀದಿಯಲ್ಲಿ ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿದೆ.

1. ಮಂಡಳಿಯ ಸಾಮಾನ್ಯ ಸಭೆಯಲ್ಲಿ ಈ ಖರೀದಿಗೆ ಅನುಮೋದನೆ ಪಡೆದ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.
2. ಖರೀದಿಯಲ್ಲಿ ಅಗತ್ಯತೆ ಉಪಯೋಗದ ಬಗ್ಗೆ ಯಾವುದೇ ಮಾಹಿತಿ ಒದಗಿಸಿರುವುದಿಲ್ಲ.
3. ಕೆ.ಟಿ.ಪಿ.ಪಿ ಕಾಯ್ದೆ 1999 ಮತ್ತು ನಿಯಮಗಳು 2000ದ ನಿಬಂಧನೆಗಳನ್ನು ಪಾಲಿಸದೆ ನೇರವಾಗಿ ಖರೀದಿಸಲಾಗಿದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಪುಸ್ತಕ ಖರೀದಿಗಾಗಿ ಪಾವತಿಸಿರುವ (ಮೆ॥ ಪುಲಾನಿ ಮತ್ತು ಪುಲಾನಿ ಇವರಿಗೆ ಪಾವತಿಸಿರುವ ಮೊತ್ತ ರೂ.867980/- ಮತ್ತು ಮೆ॥ ಕರ್ನಾಟಕ 'ಲಾ' ಜರ್ನಲ್ ಪಬ್ಲಿಕೇಶನ್ಸ್ ಇವರಿಗೆ ಪಾವತಿಸಿರುವ ಮೊತ್ತ ರೂ.78705/-) ಒಟ್ಟು ಮೊತ್ತ ರೂ.946685/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**೨೦. ಬೆಂಗಳೂರು ನಗರದ ಬಾಗಲುಕುಂಟೆಯಲ್ಲಿ ಸಭಾಭವನ ನಿರ್ಮಾಣ ಕಾಮಗಾರಿಯಲ್ಲಿ ಕಂಡುಬಂದ ನ್ಯೂನತೆಗಳು:**

ಈ ಮೇಲಿನ ಕಾಮಗಾರಿಯನ್ನು ಮೆ॥ ಕೆ.ಹೆಚ್.ಬಿ ಇವರಿಗೆ ನೀಡಲಾಗಿದೆ. ಕೆ.ಹೆಚ್.ಬಿ ಯು ಟೆಂಡರ್ ಪ್ರಕ್ರಿಯೆ ನಡೆಸಿ M/s The Trinity Group of Hubli ಇವರಿಗೆ ಶೇ.13ರ ಟೆಂಡರ್ ಪ್ರೀಮಿಯಂನೊಂದಿಗೆ ವಹಿಸಿಕೊಟ್ಟಿದೆ. ವಿವರ ಈ ಕೆಳಕಂಡಂತಿದೆ.

| | | |
|---|---|---|
| ಮೂಲ ಅಂದಾಜು ಮೊತ್ತ | : | ರೂ.41367731/- |
| ಟೆಂಡರ್ ಕಮಿಟಿ ಸಭೆ ದಿನಾಂಕ | : | 13.05.2014 |
| ಒಪ್ಪಂದ ಕರಾರು ದಿನಾಂಕ (ಗೃಹ ಮಂಡಳಿ ಮತ್ತು ಕಲ್ಯಾಣ ಆಯುಕ್ತರ ನಡುವೆ) | : | 19.11.2015 |
| ಕಾರ್ಯದೇಶ ದಿನಾಂಕ | : | 20.11.2015 |
| ಟೆಂಡರ್‌ಗಿಟ್ಟ ಮೊತ್ತ | : | 41367731/- |
| ಗುತ್ತಿಗೆ ಮೊತ್ತ (ಟೆಂಡರ್ ಪ್ರೀಮಿಯಂ ಶೇ.13) | : | 46745536/- |
| ಗುತ್ತಿಗೆ ಅವಧಿ (12 ತಿಂಗಳು) | : | 20.11.2015 ರಿಂದ 20.11.2016 |
| ಪರಿಷ್ಕೃತ ಡಿ.ಪಿ.ಆರ್ ಮೊತ್ತ | : | 51750000/- |
| ಕೆ.ಹೆಚ್.ಬಿ. ಗೆ ಬಿಡುಗಡೆಗೊಳಿಸಿದ ಮೊತ್ತ | : | 50115000/- |
| ಕೆ.ಹೆಚ್.ಬಿ. ಯು.ಸಿ ಪ್ರಕಾರ ವೆಚ್ಚ | : | 49375000/- |
| ಕಟ್ಟಡ ಹಸ್ತಾಂತರ ದಿನಾಂಕ | : | 31.12.2020 |

ಈ ಮೇಲಿನ ಕಾಮಗಾರಿಯಲ್ಲಿ ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿದೆ.

1. ಕೆ.ಹೆಚ್.ಬಿ. ಮತ್ತು ಕಾರ್ಮಿಕ ಕಲ್ಯಾಣ ಮಂಡಳಿ ಒಪ್ಪಂದದ ಪ್ರಕಾರ ಕಾರ್ಯಾದೇಶ ದಿನಾಂಕ: 20.11.2015 ರಿಂದ 12 ತಿಂಗಳೊಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸಿ ಹಸ್ತಾಂತರಿಸಲು ನಿಬಂಧನೆ 10 ರಲ್ಲಿ ತಿಳಿಸಲಾಗಿದೆ. ಆದರೆ ವಾಸ್ತವವಾಗಿ ದಿನಾಂಕ: 31.12.2020 ರಂದು (4 ವರ್ಷ 41 ದಿನಗಳು ವಿಳಂಬವಾಗಿದೆ) ಕಟ್ಟಡವನ್ನು ಹಸ್ತಾಂತರಿಸಿದೆ.
2. ಗೃಹ ಮಂಡಳಿಯು ಹಂತವಾರು ತಾಂತ್ರಿಕ ಪರಿಶೀಲನಾ ವರದಿಯನ್ನು ನೀಡಿ ಕಾರ್ಮಿಕ ಕಲ್ಯಾಣ ಆಯುಕ್ತರಿಂದ ಅನುಮೋದನೆ ಪಡೆದಿರುವ ಬಗ್ಗೆ ಯಾವುದೇ ಮಾಹಿತಿಯನ್ನು ಒದಗಿಸಿರುವುದಿಲ್ಲ.
3. ಅವಧಿ ವಿಸ್ತರಣೆಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿಯನ್ನು ಒದಗಿಸಿರುವುದಿಲ್ಲ.
4. ಪ್ರಸ್ತುತ ಗೃಹ ಮಂಡಳಿಯು ಒದಗಿಸಿರುವ ಉಪಯುಕ್ತತಾ ಪ್ರಮಾಣ ಪತ್ರದ ಪ್ರಕಾರ ಕಾರ್ಮಿಕ ಕಲ್ಯಾಣ ಮಂಡಳಿ ಬಿಡುಗಡೆಗೊಳಿಸಿದ ಮೊತ್ತದಲ್ಲಿ ರೂ.740000/- ಗಳನ್ನು ಉಪಯೋಗಿಸದೇ ತನ್ನಲ್ಲೇ ಉಳಿಸಿಕೊಂಡಿರುವುದಾಗಿ ತಿಳಸಿದೆ ಹಾಗೂ ಪರಿಷ್ಕೃತ ಯೋಜನಾ ವೆಚ್ಚಗನುಗುಣವಾಗಿ, ಕಾರ್ಮಿಕ ಕಲ್ಯಾಣ ಮಂಡಳಿಯು ಬಾಕಿ ಮೊತ್ತ ರೂ. 1635000/- ಗಳನ್ನು ನೀಡಬೇಕೆಂದು ಕೋರಿದೆ.
5. ಕಾಮಗಾರಿಯು ಸಂಪೂರ್ಣವಾಗಿ ಪೂರ್ಣಗೊಂಡ ಬಗ್ಗೆ ಕಾಮಗಾರಿ ಪೂರ್ಣಗೊಂಡ ದೃಢೀಕರಣವನ್ನು ಮೆ॥ ಕೆ.ಹೆಚ್.ಬಿಯು ನೀಡಿರುವುದಿಲ್ಲ. ಆಗಿದಾಗ್ಯೂ ಕಟ್ಟಡವನ್ನು ಹಸ್ತಾಂತರಗೊಳಿಸಿರುವುದು ಕಂಡಬಂದಿದೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಮಂಜಸ ದಾಖಲೆಗಳನ್ನು ಒದಗಿಸುವವರೆಗೆ ಈ ಕಾಮಗಾರಿಗಾಗಿ 2019-20ನೇ ಸಾಲಿನಲ್ಲಿ ಬಿಡುಗಡೆಗೊಳಿಸಿದ ಮೊತ್ತ (ಚೆಕ್‌ಸಂ: 884469 ದಿನಾಂಕ: 21.06.2019) ರೂ.1750000/- ಗಳನ್ನು ಆಕ್ಷೇಪಣೇಯಲ್ಲಿಡಲಾಗಿದೆ.

**21. ನಿಶ್ಚಿತ ಠೇವಣಿ ಮೇಲೆ ನಿಗಧಿತ ಬಡ್ಡಿ ಮೊತ್ತಕ್ಕಿಂತ ಕಡಿಮೆ ಪಡೆದಿರುವುದು:**

| ಕ್ರ.ಸಂ | ಬ್ಯಾಂಕ್ ಹೆಸರು | ಎಫ್.ಡಿ.ಆರ್. ಸಂಖ್ಯೆ | ಎಫ್.ಡಿ.ಆರ್. ಮೊತ್ತ | ಪರಿಪಕ್ವ ದಿನಾಂಕ | ಬ್ಯಾಂಕ್ ಪ್ರಕಾರ ಬಡ್ಡಿ ಮೊತ್ತ | ಬ್ಯಾಂಕ್ ನೈಜವಾಗಿ ನಿಡಿರುವ ಬಡ್ಡಿ ಮೊತ್ತ | ವ್ಯತ್ಯಾಸ |
|---|---|---|---|---|---|---|---|
| 1 | ಆಂಧ್ರ ಬ್ಯಾಂಕ್ | 304120 10000 4438 | 49500000 | 04.05.19 | 3322761 | 3293478 | 29283 |
| 2 | ಅಲಹಬಾದ್ ಬ್ಯಾಂಕ್ | 1) 504799 70925<br>2) 504799 71351 | 485508<br>485508 | 30.12.19<br>30.12.19 | 199848<br>199848 | 199605<br>199605 | 243<br>243 |
| | | | | **ಒಟ್ಟು** | **3722457** | **3692688** | **29769** |

ಕಾರ್ಮಿಕ ಕಲ್ಯಾಣ ಮಂಡಳಿಯ ವಿವಿಧ ಬ್ಯಾಂಕ್‌ಗಳಲ್ಲಿ ಹೆಚ್ಚುವರಿ ಮೊತ್ತವನ್ನು ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಿದೆ. ಠೇವಣಿಯಿಂದ ಗಳಿಸುವ ಬಡ್ಡಿ ಮೊತ್ತಕ್ಕೆ ಆದಾಯ ತೆರಿಗೆ ಕಾಯ್ದೆ 1961 ಸೆಕ್ಷನ್ 196 ರ ಪ್ರಕಾರ ಆದಾಯ ತೆರಿಗೆಯಿಂದ ವಿನಾಯಿತಿ ಪಡೆದಿದೆ. ಆದರೆ ಮೇಲಿನ ಹೂಡಿಕೆಗಳಿಂದ ಗಳಿಸಿದ ಬಡ್ಡಿ ವ್ಯತ್ಯಾಸದ ಮೊತ್ತ ರೂ.29769/– ಗಳಿಗೆ ಸಂಬಂಧಿಸಿದ ಬ್ಯಾಂಕ್‌ಗಳು ಕಡಿಮೆ ಬಡ್ಡಿ ನೀಡಿರುವುದು ಕಂಡುಬಂದಿದೆ. ಆದುದರಿಂದ ಸದರಿ ಮೊತ್ತವನ್ನು ಬ್ಯಾಂಕ್‌ಗಳಿಂದ ವಸೂಲಾತಿಗೆ ಸೂಚಿಸಿದೆ.

**22. ಉದ್ಯೋಗ ಸಂಸ್ಥೆಗಳು ಕಾರ್ಮಿಕರಿಗೆ ನೀಡಬೇಕಾದ ಮೊತ್ತ ಕಾರಣಾಂತರಗಳಿಂದ ಅನ್‌ಕ್ಲೇಮ್ ಆಗಿ ಉಳಿದು ಬಂದ ಮೊತ್ತ ವಸೂಲಿಸದಿರುವುದು:**

2019–20ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಅನ್‌ಕ್ಲೇಮ್ ಖಾತೆಯ ಜಮೆಗಳನ್ನು ಪರಿಶೀಲಿಸಲಾಗಿ ಉದ್ಯೋಗ ಸಂಸ್ಥೆಯ ನೀಡಿರುವ (ಐ.ಓ.ಸಿ ಬ್ಯಾಂಕ್) ಚೆಕ್ ಸಂಖ್ಯೆ: 449972/– ದಿನಾಂಕ: 29.07.2019 ರ ಮೊತ್ತ ರೂ. 29420/– ಗಳು ಬ್ಯಾಂಕ್ ಖಾತೆಗೆ ಹೊಂದಾಣಿಕೆಯಾಗದೇ (ಚೆಕ್ ಕಲಾವಧಿ ಮುಕ್ತಾಯವಾಗಿದ್ದು) ಬ್ಯಾಂಕಿನಿಂದ ಹಿಂದಾರುಗಿಸಲಾಗಿದೆ. ಸದರಿ ಮೊತ್ತವನ್ನು ಸಂಬಂಧಿಸಿದ ಸಂಸ್ಥೆಯಿಂದ ಪಡೆಯಲು ಇದುವರೆವಿಗೂ ಯಾವುದೇ ಕ್ರಮ ವಹಿಸಿರುವುದಿಲ್ಲ. ತಕ್ಷಣ ಕ್ರಮವಹಿಸಿ ಬದಲಿ ಚೆಕ್ ಪಡೆದು ಕಾರ್ಮಿಕ ಕಲ್ಯಾಣ ಮಂಡಳಿ ಖಾತೆಹೆ ಜಮೆ ಮಾಡಿ ವಿವರಗಳನ್ನು ಪರಿಶೀಲನೆಗೆ ಒದಗಿಸುವವರೆಗೆ ಸದರಿ ಮೊತ್ತ ರೂ.29420/– ಗಳನ್ನು ವಸೂಲಾತಿಯಲ್ಲಿಡಲಾಗಿದೆ.

**23. ವಂತಿಕೆ ಹಣವನ್ನು ಚೆಕ್ ಮೂಲಕ ಸಂಗ್ರಿಹಿಸಿದ್ದು, ಈ ಸಂಬಂಧ ತಿರಸ್ಕೃತ ಚೆಕ್‌ಗಳ ಮೊತ್ತವನ್ನು ವಸೂಲಿಸದಿರುವುದು:**

2019–20ನೇ ಸಾಲಿನ ವಂತಿಕೆ ಸಂಗ್ರಹಣಾ ಖಾತೆ ಸಂಖ್ಯೆ 04282010813335 (ಕೆನರಾ ಬ್ಯಾಂಕ್) ಜಮೆಗಳನ್ನು ಪರಿಶೀಲಿಸಲಾಗಿ ರೂ.306097/– ಮೊತ್ತದ ಚೆಕ್‌ಗಳು ರದ್ದುಗೊಡಿರುತ್ತದೆ. ಈ ಚೆಕ್‌ಗಳನ್ನು ನೀಡಿದ ಸಂಸ್ಥೆಗಳಿಂದ ಬದಲಿ ಚೆಕ್‌ಗಳನ್ನು ಪಡೆದು ಕಾರ್ಮಿಕ ಕಲ್ಯಾಣ ಮಂಡಳಿಯ ಖಾತೆಗೆ ಜಮೆಮಾಡಿ ವಿವರಗಳನ್ನು ಸಲ್ಲಿಸುವವರೆಗೆ ರೂ.306097/– ಗಳನ್ನು ವಸೂಲಾತಿಯಲ್ಲಿಡಲಾಗಿದೆ. ಚೆಕ್ ವಾರು ವಿವರಗಳನ್ನು ಅನುಬಂಧ–7 ರಲ್ಲಿ ವರದಿಗೆ ಲಗತ್ತಿಸಿದೆ.

**24. ಕಾರ್ಮಿಕ ಕಲ್ಯಾಣ ಮಂಡಳಿಯಿಂದ ವಿವಿಧ ಯೋಜನೆಗಳ ಅನುಷ್ಟಾನಕ್ಕಾಗಿ ನೀಡಿದ ಚೆಕ್‌ಗಳು ನಗದೀಕರಣವಾಗದಿರುವುದು.**

2019–20ನೇ ಸಾಲಿನ ಕಾರ್ಮಿಕ ಕಲ್ಯಾಣ ಮಂಡಳಿಯ ವಿವಿಧ ಯೋಜನೆಗಳ ಅನುಷ್ಟಾನ ಕಾರ್ಯಕ್ರಮಗಳಿಗೆ ಭರಿಸಿದ ವೆಚ್ಚಗಳನ್ನು ಪರಿಶೀಲಿಸಲಾಗಿ, ಮಂಡಳಿಯು ನೀಡುವ ವಿದ್ಯಾರ್ಥಿ ವೇತನ, ಅಂತ್ಯ ಸಂಸ್ಕಾರ, ಅಪಘಾತ ಧನಸಹಾಯ, ಇತರೆ ಕಾರ್ಯಕ್ರಮಗಳಿಗೆ ನೀಡಿದ ಚೆಕ್‌ಗಳು ನಗಧೀಕರಣವಾಗದೇ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯ ತಲುಪದಿರುವುದು ಲೆಕ್ಕಪರಿಶೋಧನೆ ವೇಳೆಯಲ್ಲಿ ಕಂಡುಬಂದಿದೆ. ಈ ರೀತಿ ನಗದೀಕರಣವಾಗದಿರುವ ಚೆಕ್‌ಗಳ ಒಟ್ಟು ಮೊತ್ತ ರೂ.5451876/– ಆಗಿದ್ದು, ಮಾಹೆವಾರು ವಿವರಗಳನ್ನು ಅನುಬಂಧ_8 ರಲ್ಲಿ ನೀಡಿ ವರದಿಗೆ ಲಗತ್ತಿಸಿದೆ. ಈ ಮೇಲಿನ ನಗದೀಕರಣಗೊಳ್ಳದ ಚೆಕ್‌ಗಳ ಮೊತ್ತಗಳಿಗೆ ಸಂಬಂಧಸಿದಂತೆ ಪಲಾನುಭವಿಗಳ ನಿಖರ ಬ್ಯಾಂಕ್ ಖಾತೆಗಳು ಹಾಗೂ ಅದಕ್ಕೆ ಸಂಬಂಧಿಸಿದ ದಾಸ್ತಾವೇಜುಗಳನ್ನು ಸಂಗ್ರಹಿಸಿ ಬದಲಿ ಚೆಕ್‌ಗಳನ್ನು ನೀಡಿ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯ ದೊರೆಕಿಸಿಕೊಡಲು ತಕ್ಷಣ ಕ್ರಮವಹಿಸಲು ಸೂಚಿಸಿದೆ. ಈ ಸಂಬಂಧ ಅಗತ್ಯ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸುವವರೆಗೆ ರೂ.5451876/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**25. ಮಂಡಳಿಯ ಖಜಾನೆ ಖಾತೆ ಸಂಖ್ಯೆ: 104067 ರಲ್ಲಿ ಉಳಿದುಬಂದಿರುವ ಹಣವನ್ನು ಮಂಡಳಿಯ ಬ್ಯಾಂಕ್ ಖಾತೆಗೆ ವರ್ಗಾಯಿಸದಿರುವುದು:**

ಕಾರ್ಮಿಕ ಕಲ್ಯಾಣ ಮಂಡಳಿಯ ಆರ್ಥಿಕ ವ್ಯವಹಾರಗಳನ್ನು ಬ್ಯಾಂಕ್ ಖಾತೆ ಮೂಲಕ ನಿರ್ವಹಿಸಿಕೊಂಡು ಬರುತ್ತಿದೆ. ಈ ಹಿಂದಿನ ಖಜಾನೆ ಖಾತೆ ಸಂಖ್ಯೆ: 104067 ರಲ್ಲಿ ರೂ.1201154/– ಗಳ ಶಿಲ್ಕನ್ನು ಹೊಂದಿದ್ದು, ತಹಲ್‌ವರೆಗೆ ಮುಂದುವರಿಸಿಕೊಂಡು ಬಂದಿದೆ. ಈ ಹಣ ಯಾವ ಯೋಜನೆಗಾಗಿ ಬಿಡುಗಡೆಗೊಂಡಿರುತ್ತದೆ ಎಂಬುದನ್ನು ಲೆಕ್ಕ ಸಮನ್ವಯದ ಮೂಲಕ ಗುರುತಿಸಿ ಖಜಾನೆಯಿಂದ ಸದರಿ ಮೊತ್ತವನ್ನು ಸಂಬಂಧಿಸಿದ ಕಾರ್ಯ ಯೋಜನೆಯ ಬ್ಯಾಂಕ್ ಖಾತೆಗೆ ವರ್ಗಾಯಿಸಿ ಸಂಬಂಧಿಸಿದ ಕಾರ್ಯ ಚಟುವಟಿಕೆಗಳ ಅನುಷ್ಠಾನಕ್ಕೆ ಬಳಸಲು ಕ್ರಮಕೈಗೊಳ್ಳಬೇಕೆಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯಿಸಿದೆ.

**26. ನಿಶ್ಚಿತ ಠೇವಣಿ ಹೂಡಿಕೆಗಳ ವಿವರ :–**

2019–20ನೇ ಸಾಲಿನಲ್ಲಿ ಒಟ್ಟು 55 ಹೂಡಿಕೆ ಪತ್ರಗಳಿದ್ದು, ಇವುಗಳ ಒಟ್ಟು ಮೌಲ್ಯ ರೂ. 1006300000/– ಗಳಿದ್ದು, ಪರಿಪಕ್ವ ಮೊತ್ತ ರೂ. 1073404814/– ಗಳಾಗಿರುತ್ತದೆ. ಬಗ್ಗೆ ವಹಿಯನ್ನು ನಿರ್ವಹಿಸಲಾಗಿದೆ. ಅದರಂತೆ ಬಂಡವಾಳ ಹೂಡಿಕೆಗಳನ್ನು ನಿಶ್ಚಿತ ಠೇವಣಿ ರೂಪದಲ್ಲಿ ತೊಡಗಿಸಿದ್ದು, ಅವುಗಳನ್ನು ಲೆಕ್ಕ ಪರಿಶೋಧನಾ ಸಮಯದಲ್ಲಿ ಭೌತಿಕ ಪರಿಶೀಲನೆಗೆ ಹಾಜರುಪಡಿಸಿದ್ದು, ಪರಿಶೀಲಿಸಲಾಯಿತು. ಸದರಿ ಹೂಡಿಕೆಗಳ ವಿವರಗಳನ್ನು **ಅನುಬಂಧ–9 ರಲ್ಲಿ** ನೀಡಿ ವರದಿಗೆ ಲಗತ್ತಿಸಲಾಗಿದೆ. ಹೂಡಿಕೆಗಳನ್ನು ಸರ್ಕಾರಿ ಸುತ್ತೋಲೆ ಸಂಖ್ಯೆ: ಎಫ್‌ಡಿ:38:ಟಿಎಆರ್:2018, ದಿನಾಂಕ: 27.08.2018ರ ಸೂಚನೆಯಂತೆ ಲೀಡ್ ಬ್ಯಾಂಕ್ ಶಾಖೆಗಳಿಂದ ಬಡ್ಡಿದರಕ್ಕೆ ದರಪಟ್ಟಿ ಕರೆದು ಅಧಿಕ ಬಡ್ಡಿ ನಮೂದಿಸಿದ ಬ್ಯಾಂಕ್‌ನಲ್ಲಿ ಹೂಡಿಕೆಮಾಡಬೇಕಾಗಿರುತ್ತದೆ. ಆದರೆ ಸಾಮಾನ್ಯ ಶಾಖೆಗಳಿಂದ ಬಡ್ಡಿದರ ಪಡೆದು ಹೂಡಿಕೆ ನಿರ್ಧರಿಸಲಾಗಿದೆ. ಈ ಕ್ರಮವು ಮೇಲಿನ ಸರ್ಕಾರಿ ಸುತ್ತೋಲೆಯ ನಿರ್ದೇಶನಗಳನ್ನು ಉಲ್ಲಂಘಿಸಿರುತ್ತದೆ. ಇನ್ನು ಮುಂದೆ ಸರ್ಕಾರಿ ಸುತ್ತೋಲೆಯ ನಿರ್ದೇಶನವನ್ನು ತಪ್ಪದೆ ಪಾಲಿಸಲು ಸೂಚಿಸಿದೆ.

**27. 2019–20ನೇ ಸಾಲಿನಲ್ಲಿ ಬಾಡಿಗೆ ವಸೂಲಿಯಲ್ಲಿ ಕಂಡುಬಂದ ನ್ಯೂನತೆಗಳು:**

2019–20ನೇ ಸಾಲಿನಲ್ಲಿ ಬಾಡಿಗೆ ಬಗ್ಗೆ ಡಿಸಿಬಿ ವಹಿ ನಿರ್ವಹಿಸಿಲ್ಲ. ಆದಾಗ್ಯೂ ಸಂಸ್ಥೆಯವರು ನೀಡಿದ ವಿವರ ಹಾಗೂ ಲೆಕ್ಕ ತನಿಖೆಗೆ ಲಭ್ಯವಾದ ಮಾಹಿತಿಯಂತೆ ವಿವರ ನೀಡಿದೆ. ಕೂಡಲೇ ವಹಿಯನ್ನು ನಿರ್ವಹಿಸಲು ಸೂಚಿಸಿದೆ.

ಕಾರ್ಮಿಕ ಕಲ್ಯಾಣ ಮಂಡಳಿಗೆ ಸಂಬಂಧಿಸಿದ ಇತರೆ ಸಂಸ್ಥೆಗಳ ಬಾಡಿಗೆ ಡಿ.ಸಿ.ಬಿ ವಿವರ ಈ ಕೆಳಗಿನಂತೆ ಇರುತ್ತದೆ.

| ಕ್ರ.ಸಂ | ವಿವರ | | 2019-20 |
|---|---|---|---|
| 1 | ನ್ಯೂ ಇಂಡಿಯಾ ಅಸ್ಸೂರೆನ್ಸ್ ಲಿ॥ ನೆಲಮಹಡಿ | ಪ್ರಾರಂಭ ಶಿಲ್ಕು | 0 |
| | | ಬೇಡಿಕೆ | 1231692 |
| | | ಒಟ್ಟು | 1231692 |
| | | ವಸೂಲಿ | 1129051 |
| | | ಬಾಕಿ | 102641 |
| 2 | ಎಸ್.ಬಿ.ಐ ಎ.ಟಿ.ಎಂ ಕೇಂದ್ರದಿಂದ | ಪ್ರಾರಂಭ ಶಿಲ್ಕು | 0 |
| | | ಬೇಡಿಕೆ | 130272 |
| | | ಒಟ್ಟು | 130272 |
| | | ವಸೂಲಿ | 130272 |
| | | ಬಾಕಿ | 0 |
| 3 | ಮೊದಲನೆ ಮಹಡಿಯ ಕಚೇರಿಯಿಂದ ಷರಾ: 04/2019 ರಿಂದ 7/2019 ರವರೆಗೆ Reginal Director Central Education ರವರಿಗೆ ಬಾಡಿಗೆ ನೀಡಿದ್ದು, ತದ ನಂತರ ಸ್ವಂತ ಕಛೇರಿ ಕಾರ್ಯಕ್ಕೆ ಉಪಯೋಗಿಸಿದೆ. | ಪ್ರಾರಂಭ ಶಿಲ್ಕು | 74900 |
| | | ಬೇಡಿಕೆ | 374500 |
| | | ಒಟ್ಟು | 449400 |
| | | ವಸೂಲಿ | 374500 |
| | | ಬಾಕಿ | 74900 |
| 4 | ಬಾಪೂಜಿ ನಗರ ಸಮುದಾಯ ಭವನ | ಪ್ರಾರಂಭ ಶಿಲ್ಕು | 142320 |
| | | ಬೇಡಿಕೆ | 875268 |
| | | ಒಟ್ಟು | 1017588 |
| | | ವಸೂಲಿ | 1017588 |
| | | ಬಾಕಿ | 0 |
| 5 | ಪೀಣ್ಯ ಕಟ್ಟಡ 2 & 3 ನೇ ಮಹಡಿ | ಪ್ರಾರಂಭ ಶಿಲ್ಕು | 431638 |
| | | ಬೇಡಿಕೆ | 850656 |
| | | ಒಟ್ಟು | 1282294 |
| | | ವಸೂಲಿ | 1011742 |
| | | ಬಾಕಿ | 270552 |
| 6 | ಪೀಣ್ಯ ಸಮುದಾಯ ಭವನದ ಮದುವೆ ಇನ್ನಿತರೆ ಸಮಾರಂಭಗಳ ಬಾಡಿಗೆ ವಿವರ | ಪ್ರಾರಂಭ ಶಿಲ್ಕು | 0 |
| | | ಬೇಡಿಕೆ | 473300 |
| | | ಒಟ್ಟು | 473300 |
| | | ವಸೂಲಿ | 450700 |
| | | ಬಾಕಿ | 22600 |
| 7 | ಪೀಣ್ಯ ಸಮುದಾಯ ಭವನ ನೆಲಮಹಡಿ | ಪ್ರಾರಂಭ ಶಿಲ್ಕು | 30000 |
| | | ಬೇಡಿಕೆ | 120000 |
| | | ಒಟ್ಟು | 150000 |
| | | ವಸೂಲಿ | 120000 |
| | | ಬಾಕಿ | 30000 |
| 8 | ವಿಜಯಪುರ ಕಟ್ಟಡ 1ನೇ ಮಹಡಿ | ಪ್ರಾರಂಭ ಶಿಲ್ಕು | 112320 |
| | | ಬೇಡಿಕೆ | 149760 |
| | | ಒಟ್ಟು | 262080 |

| | | | |
|---|---|---|---|
| | | ವಸೂಲಿ | 99840 |
| | | ಬಾಕಿ | 162240 |
| 9 | ವಿಜಯಪುರ ಕಟ್ಟಡ 2ನೇ ಮಹಡಿ | ಪ್ರಾರಂಭ ಶಿಲ್ಕು | 168167 |
| | | ಬೇಡಿಕೆ | 171492 |
| | | ಒಟ್ಟು | 339659 |
| | | ವಸೂಲಿ | 300112 |
| | | ಬಾಕಿ | 39547 |
| 10 | ದಾವಣಗೆರೆ ಸಮುದಾಯ ಭವನ | ಪ್ರಾರಂಭ ಶಿಲ್ಕು | 24000 |
| | | ಬೇಡಿಕೆ | 54540 |
| | | ಒಟ್ಟು | 78540 |
| | | ವಸೂಲಿ | 40760 |
| | | ಬಾಕಿ | 37780 |
| 11 | ಬೆಂಗಳೂರು ಬಾಗಲಗುಂಟೆ ಜಮೀನು (ಕಾರ್ಮಿಕ ಇಲಾಖೆಗೆ ಗುತ್ತಿಗೆ) (ವರ್ಷಕ್ಕೆ 5000) | ಪ್ರಾರಂಭ ಶಿಲ್ಕು | 10000 |
| | | ಬೇಡಿಕೆ | 5000 |
| | | ಒಟ್ಟು | 15000 |
| | | ವಸೂಲಿ | 5000 |
| | | ಬಾಕಿ | 10000 |
| 12 | ಬೆಂಗಳೂರು ಬಾಗಲಗುಂಟೆ ಜಮೀನು (ಉದ್ಯೋಗ ಮತ್ತು ತರಬೇತಿ ಇಲಾಖೆಗೆ ಗುತ್ತಿಗೆ ನೀಡಿರುವುದು) (ವರ್ಷಕ್ಕೆ 10000) | ಪ್ರಾರಂಭ ಶಿಲ್ಕು | 80000 |
| | | ಬೇಡಿಕೆ | 10000 |
| | | ಒಟ್ಟು | 90000 |
| | | ವಸೂಲಿ | 0 |
| | | ಬಾಕಿ | 90000 |
| 13 | ಬಾಪೂಜಿ ನಗರ ಸಮುದಾಯ ಭವನ | ಪ್ರಾರಂಭ ಶಿಲ್ಕು | 0 |
| | | ಬೇಡಿಕೆ | 478200 |
| | | ಒಟ್ಟು | 478200 |
| | | ವಸೂಲಿ | 478200 |
| | | ಬಾಕಿ | 0 |
| 14 | ವಿಜಯಪುರ ಕಟ್ಟಡದ ನೆಲಮಹಡಿ | ಪ್ರಾರಂಭ ಶಿಲ್ಕು | 17051 |
| | | ಬೇಡಿಕೆ | 108660 |
| | | ಒಟ್ಟು | 125711 |
| | | ವಸೂಲಿ | 108660 |
| | | ಬಾಕಿ | 17051 |
| 15 | ಬಾಪೂಜಿ ನಗರ ಮೈಸೂರು ರಸ್ತೆ ಅಸಂಘಟಿತ ಸೇವಾ ಕೇಂದ್ರ | ಪ್ರಾರಂಭ ಶಿಲ್ಕು | 0 |
| | | ಬೇಡಿಕೆ | 123600 |
| | | ಒಟ್ಟು | 123600 |
| | | ವಸೂಲಿ | 123600 |
| | | ಬಾಕಿ | 0 |

**ಬಾಡಿಗೆ ಬಾಕಿ ಇರುವ ಘೋಷ್ವಾರೆ ವಿವರ :-**

| ಕ್ರ.ಸಂ | ವಿವರ | 31.03.2020 ಕ್ಕೆ ಬಾಡಿಗೆ ಬಾಕಿ ಮೊತ್ತ |
|---|---|---|
| 1 | ನ್ಯೂ ಇಂಡಿಯಾ ಅಸ್ಸೂರೆನ್ಸ್ ಲಿ॥ ನೆಲಮಹಡಿ | 102641 |
| 2 | ಎಸ್.ಬಿ.ಐ ಎ.ಟಿ.ಎಂ ಕೇಂದ್ರದಿಂದ | 0 |
| 3 | ಮೊದಲನೆ ಮಹಡಿಯ ಕಚೇರಿಯಿಂದ | 74900 |
| 4. | ಬಾಪೂಜಿ ನಗರ ಸಮುದಾಯ ಭವನ | 0 |
| 5. | ಪೀಣ್ಯ ಕಟ್ಟಡ 2 & 3 ನೇ ಮಹಡಿ | 270552 |
| 6. | ಪೀಣ್ಯ ಸಮುದಾಯ ಭವನದ ಮದುವೆ ಇನ್ನಿತರೆ ಸಮಾರಂಭಗಳ ಬಾಡಿಗೆ ವಿವರ | 22600 |
| 7. | ಪೀಣ್ಯ ಸಮುದಾಯ ಭವನ ನೆಲಮಹಡಿ | 30000 |
| 8. | ವಿಜಯಪುರ ಕಟ್ಟಡ 1ನೇ ಮಹಡಿ | 162240 |
| 9. | ವಿಜಯಪುರ ಕಟ್ಟಡ 2ನೇ ಮಹಡಿ | 39547 |
| 10. | ದಾವಣಗೆರೆ ಸಮುದಾಯ ಭವನ | 37780 |
| 11. | ಬೆಂಗಳೂರು ಬಾಗಲಗುಂಟೆ ಜಮೀನು (ಕಾರ್ಮಿಕ ಇಲಾಖೆಗೆ ಗುತ್ತಿಗೆ) | 10000 |
| 12. | ಬೆಂಗಳೂರು ಬಾಗಲಗುಂಟೆ ಜಮೀನು (ಉದ್ಯೋಗ ಮತ್ತು ತರಬೇತಿ ಇಲಾಖೆಗೆ ಗುತ್ತಿಗೆ ನೀಡಿರುವುದು) | 90000 |
| 13 | ಬಾಪೂಜಿ ನಗರ ಸಮುದಾಯ ಭವನ | 0 |
| 14 | ವಿಜಯಪುರ ಕಟ್ಟಡದ ನೆಲಮಹಡಿ | 17051 |
| 15 | ಬಾಪೂಜಿ ನಗರ ಮೈಸೂರು ರಸ್ತೆ ಅಸಂಘಟಿತ ಸೇವಾ ಕೇಂದ್ರ | 0 |
| | **ಒಟ್ಟು** | **857311** |

ಮೇಲೆ ವಿವರಿಸದಂತೆ ಬಾಕಿ ಇರುವ ಬಾಡಿಗೆ ಮೊತ್ತವನ್ನು ಸಂಬಂಧಿಸಿದ ಬಾಡಿಗೆದಾರರಿಂದ ವಸೂಲಿಸಿ ಜಮಾ ಮಾಡುವುದು ಪ್ರತಿ ಮೂರು ವರ್ಷಕ್ಕೊಮ್ಮೆ ಬಾಡಿಗೆಯನ್ನು ಪರಿಸ್ಕೃತಗೊಳಿಸಿ ವಸೂಲಿಮಾಡಬೇಕಿರುತ್ತದೆ ಆದರೆ ಬಾಡಿಗೆದಾರರ ಮೂಲ ಒಪ್ಪಂದದ ಕಡತವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಇದರಿಂದ ಬಾಡಿಗೆದಾರರ ಬಾಡಿಗೆ ವಿವರವನ್ನು ಸಂಪೂರ್ಣವಾಗಿ ತಿಳಿಯಲು ಸಾಧ್ಯವಾಗಿರುವುದಿಲ್ಲ. ಬಾಕಿ ಇರುವ ಬಾಡಿಗೆ ಮೊತ್ತ ರೂ.857311/- ಗಳನ್ನು ಬಾಡಿಗೆದಾರರರಿಂದ ವಸೂಲಿಸಿ ಮಂಡಳಿಯ ಖಾತೆಗೆ ಜಮೆ ಮಾಡಲು ಕ್ರಮವಹಿಸುವುದು. ಪ್ರಸಕ್ತ ಸಾಲಿನ ಬೇಡಿಕೆ, ವಸೂಲಾತಿ, ಮತ್ತು ಬಾಕಿ ವಿವರ ಈ ಕೆಳಕಂಡಂತಿದೆ.

**ಪ್ರಸಕ್ತ ಸಾಲಿನ ಬಾಡಿಗೆ ವಿವರ**

| | |
|---|---|
| 2019-20ಕ್ಕೆ ಬೇಡಿಕೆ | 5156940 |
| 2019-20ಕ್ಕೆ ವಸೂಲಾತಿ | 4957999 |
| ಬಾಕಿ | 198941 |

ಪ್ರಸಕ್ತ ಸಾಲಿನ ಬಾಕಿ ಮೊತ್ತ ರೂ.198941/- ಗಳನ್ನು ವಸೂಲಾತಿಯಲ್ಲಿಡಲಾಗಿದೆ.

# ಭಾಗ–4

## ೨೮. ನಿಧಿಯನ್ನು ನಿಹಿತಗೊಳಿಸುವುದು ಮತ್ತು ಅದರ ವಿನಿಯೋಗ:–

ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ 1965 ಮತ್ತು 1968ರ ನಿಯಮ 8(2)ರ (1)ನೇ ಉಪ–ಪ್ರಕರಣದಂತೆ ನಿಧಿಯಲ್ಲಿನ ಹಣವನ್ನು ಮಂಡಳಿಯ ಈ ಕೆಳಕಂಡ ವೆಚ್ಚವನ್ನು ಭರಿಸಲು ಉಪಯೋಗಿಸಬಹುದು.

1. ವಾಚನಾಲಯಗಳು ಮತ್ತು ಗ್ರಂಥಾಲಯಗಳನ್ನ ಒಳಗೊಂಡು ಸಮುದಾಯ ಮತ್ತು ಸಮಾಜ ಶಿಕ್ಷಣ ಕೇಂದ್ರಗಳು.
2. ಸಮುದಾಯ ಅವಶ್ಯಕತೆಗಳು.
3. ಆಟಗಳು ಮತ್ತು ಕ್ರೀಡೆಗಳು.
4. ವಿಹಾರಗಳು, ಪ್ರವಾಸಗಳು ಮತ್ತು ವಿಶ್ರಾಂತಿ ಗೃಹಗಳು.
5. ಮನೋರಂಜನೆ ಮತ್ತು ಇತರ ಬಗೆಯ ವಿನೋದಗಳು.
6. ಮಹಿಳೆಯರು ಮತ್ತು ನಿರುದ್ಯೋಗ ವ್ಯಕ್ತಿಗಳಿಗಾಗಿ ಗೃಹ ಕೈಗಾರಿಕೆಗಳು ಮತ್ತು ಉಪ ಉದ್ಯೋಗಗಳು.
7. ಸಾಮಾಜಿಕ ಸ್ವರೂಪದ ಸಮುದಾಯ ಚಟುವಟಿಕೆಗಳು.
8. ಈ ಅಧಿನಿಯಮದ ಉದ್ದೇಶಗಳಿಗಾಗಿ ನೇಮಕಗೊಂಡ ಸಿಬ್ಬಂದಿಯ ಭತ್ಯೆಗಳನ್ನು ಒಳಗೊಂಡು ಅಧಿನಿಯಮವನ್ನು ನಿರ್ವಹಿಸುವ ಬಗ್ಗೆ ಖರ್ಚು.
9. ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಕಾರ್ಮಿಕರ ಜೀವನ ಮಟ್ಟವನ್ನು ಸುಧಾರಿಸುವ ಮತ್ತು ಅವರ ಸಾಮಾಜಿಕ ಸ್ಥಿತಿಗತಿಗಳನ್ನು ಉತ್ತಮ ಪಡಿಸುವಂತಹ ಇತರೆ ಉದ್ದೇಶಗಳು.
10. ಮಂಡಳಿಯ ರಾಜ್ಯ ಸರ್ಕಾರದ ಅನುಮೋದನೆಯನ್ನು ಪಡೆದು ಕಾರ್ಮಿಕರ ಕಲ್ಯಾಣಕ್ಕಾಗಿ ಯಾವುದೇ ಚಟುವಟಿಕೆಯ ಸಹಾಯಾರ್ಥವಾಗಿ ಯಾವನೇ ನಿಯೋಜಕ ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ಇತರೆ ಸೌಕರ್ಯಕ್ಕೆ ಅನುದಾನವನ್ನು ಕೊಡಬಹುದು.
11. ಯಾವುದೇ ನಿರ್ಧಿಷ್ಟ ವೆಚ್ಚ ನಿಧಿಗೆ ಖರ್ಚು ಹಾಕಬಹುದು ಅಥವಾ ಹಾಕಕೂಡದು ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ ಆ ವಿಷಯನ್ನು ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ಕೊಡುವ ತೀರ್ಮಾನ ಅಂತಿಮವಾಗಿರ ತಕ್ಕದ್ದು.
12. ಮಂಡಳಿಗೆ ಕಾರ್ಮಿಕ ಕಲ್ಯಾಣ ನಿಧಿಯನ್ನು ಕ್ರಮಬದ್ಧವಾಗಿ ಮಂಡಲಿಗೆ ವರ್ಗಾಯಿಸಲಾಗಿದ್ದರೆ, ಯಾವುದೇ ಸಂಸ್ಥೆಯು ಆ ನಿಧಿಯಿಂದ ಹಣಕಾಸು ನೆರವನ್ನು ಮಂಡಳಿಯು ಮುಂದುವರಿಸಬಹುದು. ಕಾನೂನು ಸಮ್ಮತವಾಗಿರತಕ್ಕದ್ದು ಎಂಬ ನಿಯಮಗಳಿದ್ದಾಗ್ಯೂ ಪ್ರಸಕ್ತ ಸಾಲಿನಲ್ಲಿ ಪೂರ್ಣ ಪ್ರಮಾಣದಲ್ಲಿ ಕಾರ್ಯಚಟುವಟಿಕೆ ಕೈಗೊಳ್ಳದೆ ಕೇವಲ ವಿದ್ಯಾರ್ಥಿ ವೇತನ, ವೈದ್ಯಕೀಯ ನೆರವು, ಮೃತ ಕಾರ್ಮಿಕ ಅಂತ್ಯಕ್ರಿಯೆಗೆ ಧನ ಸಹಾಯ, ವಾರ್ಷಿಕ ಕ್ರೀಡಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ನೋಂದಾಯಿತ ಕಾರ್ಮಿಕ ಸಂಘಗಳಿಗೆ ಧನ ಸಹಾಯ ಮತ್ತು ವಾರ್ಷಿಕ ವೈದ್ಯಕೀಯ ತಪಾಸಣೆ ನಡೆಸುವ ಟ್ರೇಡ್ ಯಾನಿಯನ್/ಸಂಸ್ಥೆಗಳಿಗೆ ಧನ ಸಹಾಯ ಚಟುವಟಿಕೆಗಳಿಗೆ ಕನಿಷ್ಠ ಮಟ್ಟದಲ್ಲಿ ವೆಚ್ಚ ಭರಿಸಿದ್ದು ಮುಂದೆ ನಿಯಮಾನುಸಾರ ವೆಚ್ಚ ಭರಿಸಲು ಕ್ರಮವಹಿಸುವುದು. ಇದರಿಂದಾಗಿ ಕಾರ್ಮಿಕ ಕಲ್ಯಾಣ ಮಂಡಳಿಯ ನಿಶ್ಚಿತ ಉದ್ದೇಶಗಳು ಪೂರ್ಣಪ್ರಮಾಣದಲ್ಲಿ ಈಡೇರಿರುವುದಿಲ್ಲವೆಂದು ಲೆಕ್ಕತನಿಖೆಯಲ್ಲಿ ಅಭಿಪ್ರಾಯಿಸಿದೆ.

**29. ಕಾರ್ಮಿಕರು ಮತ್ತು ಕಾರ್ಮಿಕರ ಅವಲಂಬಿತರಿಗೆ ನೀಡಿರುವ ವಿವಿಧ ಯೋಜನೆಗಳ ವಿವರ.**

ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕ ಕಲ್ಯಾಣ ಸಂವರ್ಧನೆಗೊಳಿಸುವುದಕ್ಕೆ ಹಣಕಾಸು ನೆರವು ಒದಗಿಸಲು ಒಂದು ನಿಧಿಯನ್ನು ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ 1965 ಅಡಿಯಲ್ಲಿ ಸ್ಥಾಪಿಸಲಾಗಿದೆ. ಮಂಡಳಿಗೆ ವಂತಿಗೆ ಪಾವತಿಸುವ ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು ಅವರ ಅವಲಂಬಿತರು ಮತ್ತು ಕಾರ್ಮಿಕರ ಮಕ್ಕಳ ಕ್ಷೇಮಾಭಿವೃದ್ಧಿಗೆ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಈ ಕೆಳಗಿನ ಯೋಜನೆಗಳು ಜಾರಿಯಲ್ಲಿರುತ್ತದೆ. ಸದರಿ ಯೋಜನೆಯಡಿ ಈ ಕೆಳಕಂಡಂತೆ ವೆಚ್ಚ ಭರಿಸಿರುವ ವಿವರವನ್ನು ಪರಿಶೀಲನೆ ವೇಳೆ ಧೃಢೀಕರಿಸಿ ನೀಡಿರುತ್ತಾರೆ.

1. ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹಧನ
2. ಕಾರ್ಮಿಕರ ವೈದ್ಯಕೀಯ ನೆರವು
3. ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಗಣಕಯಂತ್ರ ತರಬೇತಿ
4. ಅಂಗವಿಕಲ ಕಾರ್ಮಿಕರಿಗೆ ತ್ರಿಚಕ್ರ ಸೈಕಲ್
5. ಕಾರ್ಮಿಕರ ಅಪಘಾತ ಧನ ಸಹಾಯ
6. ಅಂಗವಿಕಲ ಕಾರ್ಮಿಕರಿಗೆ ಕೃತಕ ಅಂಗಸಾಧನ ಖರೀದಿಗೆ ಧನ ಸಹಾಯ
7. ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ಟ್ರೆಡ್ ಯೂನಿಯನ್ ಸಂಸ್ಥೆಗಳಿಗೆ ಧನ ಸಹಾಯ
8. ವಾರ್ಷಿಕ ಕ್ರೀಡಾ ಚಟುವಟಿಕೆ ಹಮ್ಮಿಕೊಳ್ಳುವ ನೋಂದಾಯಿತ ಕಾರ್ಮಿಕ ಸಂಘಗಳಿಗೆ ಧನ ಸಹಾಯ
9. ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ
10. ಹಿಮೋಫಿಲಿಯಾ ನ್ಯೂನತೆಯಿಂದ ಬಳಲುತ್ತಿರುವ ಕಾರ್ಮಿಕರುಗಳಿಗೆ ಧನ ಸಹಾಯ.
11. ಸಮುದಾಯ ಭವನಗಳನ್ನು ಕಾರ್ಮಿಕರು ಮತ್ತು ಅವರ ಮಕ್ಕಳ ವಿವಾಹ ಮತ್ತು ಇತರೆ ಸಮಾರಂಭಗಳಿಗೆ ರಿಯಾಯಿತಿ ದರದಲ್ಲಿ ಬಾಡಿಗೆ ನೀಡುವುದು.

ಈ ಮೇಲ್ಕಂಡ ಯೋಜನೆಗಳ ಪೈಕಿ ಮಂಡಳಿಯು ಕ್ರಮ ಸಂ 1,7,8,9,11, ಯೋಜನೆಗಳಿಗೆ ಮಾತ್ರ ಯೋಜನಾ ವೆಚ್ಚ ಸೀಮಿತವಾಗಿದ್ದು, ಉಳಿಕೆ ಯೋಜನೆಗಳಿಗೆ ವ್ಯಾಪಕವಾದ ಪ್ರಚಾರ ದೊರಕದ ಕಾರಣ ಮಂಡಳಿ ತನ್ನೆಲ್ಲಾ ಯೋಜನೆಗಳನ್ನು ಜಾರಿ ತರಲು ವಿಫಲವಾಗಿದೆ. ಮಂಡಳಿಯೂ ರಾಜ್ಯ ವ್ಯಾಪ್ತಿ ಅರ್ಜಿಗಳನ್ನು ಆಹ್ವಾನಿಸಿ ಫಲಾನುಭವಿಗಳನ್ನು ಗುರುತಿಸಿ ತನ್ನ ಉದ್ದೇಶಗಳನ್ನು ಈಡೇರಿಸುವ ಬಗ್ಗೆ ಕ್ರಮವಹಿಸುವುದು. ಚಟುವಟಿಕೆವಾರು ಫಲಾನುಭವಿಗಳ ಸಂಖ್ಯೆ ಮತ್ತು ವೆಚ್ಚವನ್ನು ಅನುಬಂಧ–10ರಲ್ಲಿ ನೀಡಿ ವರದಿಗೆ ಲಗತ್ತಿಸಿದೆ.

**30. ವೇತನ ಶ್ರೇಣಿ ಪರಿಶೀಲನಾ ವಿವರ ಕುರಿತು :–**

2019–20ರ ಅಂತ್ಯಕ್ಕೆ ಸಿಬ್ಬಂದಿ ಶ್ರೇಣಿ ವಹಿ ಹಾಜರುಪಡಿಸಲಾಗಿದೆ. ಮಂಡಳಿಯ ಸಿಬ್ಬಂದಿ ಹಾಗೂ ಅಧಿಕಾರಿಗಳ ವಿವರ ದೃಢೀಕರಿಸಿ ನೀಡಿರುವ ಅಂಕಿ ಅಂಶಗಳಂತೆ ವಿವರ ಕೆಳಗಿನಂತಿದೆ.

| ಕ್ರ.ಸಂ | ಮಂಜುರಾದ ಹುದ್ದೆಗಳ ಹೆಸರು | ಹುದ್ದೆ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳು | ಖಾಲಿ ಇರುವ ಹುದ್ದೆಗಳು. |
|---|---|---|---|---|
| 1 | ಕಲ್ಯಾಣ ಆಯುಕ್ತರು | 1 | 1 | – |
| 2 | ಲೆಕ್ಕಾಧಿಕಾರಿಗಳು | 1 | 1 | – |
| 3 | ಅಧೀಕ್ಷಕರು | 1 | 1 | – |
| 4 | ಪ್ರ.ದ.ಸ | 5 | 5 | – |
| 5 | ಶ್ರೀಘಲಿಪಿಗಾರರು | 1 | 1 | 0 |
| 6 | ಕ್ಲರ್ಕ್ ಕಂ/ಟೈಪಿಸ್ಟ್ | 1 | 1 | – |
| 7 | ದ್ವಿ.ದ.ಸ | 2 | 2 | – |
| 8 | ಮೇಲ್ವಿಚಾರಕರು | 37 | 04 ಮೇ/ಎ.ದ.ಸ 15 ಪ್ರ.ದ.ಸ (26 ಮೇಲ್ವಿಚಾರಕರಿಗೆ ದಿ:11.3.2011 ರಲ್ಲಿ | 18 |

| | | | | |
|---|---|---|---|---|
| | | | ಪ್ರ.ದ.ಸ. ಹುದ್ದೆಗೆ ಮೇಲ್ದರ್ಜೆಗೇರಿಸಲಾಗಿದೆ ಕಾರ್ಯನಿರತ–19 | |
| 9 | ವಾಹನ ಚಾಲಕರು | 1 | 1 | – |
| 10 | ಗ್ರೂಫ್ ಡಿ ನೌಕರರು ವಾಚ್‌ಮ್ಯಾನ್/ಸೈಕಲ್ ಆರ್ಡ್‌ಲಿ, (2 ಪರಿಚಾರಕಹುದ್ದೆ, ಗ್ರೂಪ್ 'ಡಿ' ಹುದ್ದೆಗಳನ್ನು ಪದನ್ನೋತಿಕರಿಸಿದ ಅತಿರಕ್ತ ಹುದ್ದೆ | 76 | 37 | 39 |
| | **ಒಟ್ಟು** | **126** | **69** | **57** |

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯು ಸುಲಲಿತವಾಗಿ ಮತ್ತು ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ಖಾಲಿ ಇರುವ ಹುದ್ದೆಗಳನ್ನು ನಿಯಮಾನುಸಾರ ಭರ್ತಿಮಾಡಲು ಕ್ರಮ ವಹಿಸುವುದು ಹಾಗೂ ಮಂಡಳಿಯ ಆಶಯದಂತೆ ಪರಿಪೂರ್ಣ ಮತ್ತು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವಂತೆ ಕ್ರಮ ಕೈಗೊಳ್ಳುವುದು. ಸೂಕ್ತವಾಗಿದೆ ಎಂದು ಲೆಕ್ಕ ತನಿಖೆಯಲ್ಲಿ ಅಭಿಪ್ರಾಯಿಸಿದೆ.

### 31. ಹಬ್ಬದ ಮುಂಗಡ :–

2019–20ನೇ ಸಾಲಿನಲ್ಲಿ ಕಾರ್ಮಿಕ ಕಲ್ಯಾಣ ಮಂಡಳಿಯ ನೌಕರರಿಗೆ ಈ ಕೆಳಕಂಡಂತೆ ಹಬ್ಬದ ಮುಂಗಡವನ್ನು ಮಂಜೂರು ಮಾಡಿದ್ದು ವಿವರ ಈ ಮುಂದಿನಂತಿದೆ.

| **2019–20ನೇ ಸಾಲಿಗೆ** | (ರೂ.ಗಳಲ್ಲಿ) |
|---|---|
| ದಿನಾಂಕ 1.4.2019ಕ್ಕೆ ಪ್ರಾರಂಭಿಕ ಶಿಲ್ಕು | 50000 |
| 2019–20ನೇ ಸಾಲಿನಲ್ಲಿ ಹಬ್ಬದ ಮುಂಗಡ ಮಂಜೂರಾತಿ. | 200000 |
| **ಒಟ್ಟು ರೂ.** | **250000** |
| 2019–20ನೇ ಸಾಲಿನ ವಸೂಲಾತಿ | 149000 |
| 31.3.2020 ಕ್ಕೆ ಅಂತಿಮ ಶಿಲ್ಕು | 101000 |

**ಬಾಕಿ ಇರುವ ಹಬ್ಬದ ಮುಂಗಡ ಮೊತ್ತ ರೂ.** 101000/– ಗಳನ್ನು ಸಂಬಂಧಿಸಿದವರಿಂದ ವಸೂಲಿಸಿ ತೀರುವಳಿ ಕೈಗೊಳ್ಳುವಂತೆ ಸೂಚಿಸಿದೆ.

### 32. ಪಿಂಚಣಿ ವಂತಿಗೆ ವಿವರ :–

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ಸಿಬ್ಬಂದಿಗಳ ವೇತನದಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಕಾಆಇ/349/ಎಲ್.ಇ.ಟಿ/2000. ಬೆಂಗಳೂರು ದಿನಾಂಕ: 27.06.2001ರನ್ವಯ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ನೌಕರರ ಪಿಂಚಣಿ ನಿಧಿಗೆ 08.01.2003 ರಂತೆ ಪಿಂಚಣಿ ವಂತಿಕೆಯನ್ನು ಕಟಾಯಿಸಿ ಜಮೆ ಮಾಡಿರುವುದನ್ನು ಲೆಕ್ಕ ತನಿಖೆಗೆ ಹಾಜರುಪಡಿಸಿದ್ದು, ವಿವರಗಳು ಕೆಳಕಂಡಂತಿರುತ್ತದೆ.

| ಕ್ರ.ಸಂ | ಪಿಂಚಣಿಗೆ ಅರ್ಹ ಹುದ್ದೆಗಳು | ಅವಧಿ | ಪಿಂಚಣಿ ಮೊಬಲಗು |
|---|---|---|---|
| 1 | 36 | 2019–20 | 6191513 |

**೩೩. ಚರ ಮತ್ತು ಸ್ಥಿರಾಸ್ತಿ ವಹಿ ಕುರಿತು :-**

2019-20ನೇ ಸಾಲಿನಲ್ಲಿ ಮಂಡಳಿಗೆ ಸಂಬಂಧಿಸಿದಂತೆ ಚರ ಮತ್ತು ಸ್ಥಿರಾಸ್ತಿ ವಹಿಯನ್ನು ನಿರ್ವಹಿಸಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿದೆ. ಆದರೆ ವಾರ್ಷಿಕ ತಪಾಸಣೆ ಮಾಡಿ ದೃಢೀಕರಿಸಿದ ವಿವರಗಲು ಲಭ್ಯವಿರುವುದಿಲ್ಲ. ಆದುದರಿಂದ ವಾರ್ಷಿಕ ತಪಾಸಣೆ ಮತ್ತು ದೃಢೀಕರಣ ಮಾಡಲು ಕ್ರಮವಹಿಸಲು ಸೂಚಿಸಿದೆ. ವಿವರಗಳನ್ನು **ಅನುಬಂಧ-11 ರಲ್ಲಿ** ನೀಡಲಾಗಿದೆ.

**೩೪. ಸಭೆಗಳು:-**

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ನಿಯಮಗಳು 1968 ನಿಯಮ 13 ರನ್ವಯ ಮಂಡಳಿಯು ಕನಿಷ್ಟ ಮೂರು ತಿಂಗಳಿಗೊಮ್ಮೆ ಮತ್ತು ಅವಶ್ಯಕತೆಗೆ ಅನುಗುಣವಗಿ ಸಭೆ ಸೇರತಕ್ಕದ್ದು ಆದರೆ ಮಂಡಳಿಯಲ್ಲಿ ಸದರಿ ಸಭೆಗಳನ್ನು ನಿಯತಕಾಲಿಕವಾಗಿ ನಡೆಸಿರುವುದಿಲ್ಲ. ಕೇವಲ ಒಂದು ಸಭೆಯನ್ನು ದಿನಾಂಕ: 26.07.2019ರಂದು ಆಯವ್ಯಯ ಅನುಮೋದನೆಗಾಗಿ ನಡೆಸಲಾಗಿದೆ. ನಿಯಮ ರೀತ್ಯ ಸಭೆಗಳನ್ನು ಆಯೋಜಿಸಲು ಮಂಡಳಿ ಕ್ರಮವಹಿಸಬೇಕೆಂದು ಲೆಕ್ಕ ತನಿಖೆಯಲ್ಲಿ ಅಭಿಪ್ರಾಯಿಸಿದೆ.

**೩೫. ಸೇವಾ ಪುಸ್ತಕದಲ್ಲಿ ಕಂಡುಬಂದ ನ್ಯೂನತೆಗಳು:-**

ಈ ಮಂಡಳಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿ/ನೌಕರರ ಸೇವಾ ವಹಿಗಳನ್ನು ಪರಿಶೀಲಿಸಲಾಗಿ ಈ ಕೆಳ ನ್ಯೂನತೆಗಳು ಕಂಡುಬಂದಿರುತ್ತದೆ.

1. ವರ್ಷಾಂತ್ಯಕ್ಕೆ ನೌಕರರ ಸೇವಾ ಪುಸ್ತಕವನ್ನು ಆಯುಕ್ತರು ಮತ್ತು ನೌಕರರು ಪರಿಶೀಲಿಸಿ ಸಹಿ ಮಾಡಿರುವುದಿಲ್ಲ.
2. ಕುಟುಂಬ ಪಿಂಚಣಿ ಮೊದಲಾದ ನೌಕರರ ಸೌಲಭ್ಯವವನ್ನು ಇತ್ಯರ್ಥಗೊಳಿಸುವ ಸಲುವಾಗಿ ನಾಮ ನಿರ್ದೇಶನಗಳ ಅವಶ್ಯಕತೆಯಿದ್ದು ಸೇವಾ ಪುಸ್ತಕದಲ್ಲಿ ದೃಢೀಕರಿಸಿ ಲಗತ್ತಿಸಿರುವುದಿಲ್ಲ.
3. ಕುಟುಂಬ ಸದಸ್ಯರ ಪಟ್ಟಿಯನ್ನು ಸೇವಾ ಪುಸ್ತಕದಲ್ಲಿ ಲಗತ್ತಿಸಿರುವುದಿಲ್ಲ.
4. ನಾಮ ನಿರ್ದೇಶನಗಳ ನಿಗಧಿತ ದೃಢೀಕೃತ ಪ್ರಪತ್ರಗಳನ್ನು ಲಗತ್ತಿಸಿರುವುದಿಲ್ಲ.

ಮೇಲಿನ ಕೆಲವು ಈ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಸೂಚಿಸಿದೆ.

**೩೬. ಕ್ರಿಯಾ ಯೋಜನೆ ರೂಪಿಸಿಕೊಳ್ಳದಿರುವುದು :-**

2019-20ನೇ ಸಾಲಿನಲ್ಲಿ ಈ ಮಂಡಳಿಯ ವತಿಯಿಂದ ಕೈಗೊಳ್ಳಬೇಕಾದ ವಾರ್ಷಿಕ ಯೋಜನೆಗಳ ಅನುಷ್ಠಾನಕ್ಕಾಗಿ ಐಟಂವಾರು ಚಟುವಟಿಕೆಗಳ ಅನುಮೋದನೆ ಪಡೆದಿರುವ (ಕ್ರಿಯಾ ಯೋಜನೆಗಳ) ಪಟ್ಟಿಯನ್ನು ಒದಗಿಸುವಂತೆ ಕೋರಿ ಲೆಕ್ಕ ತನಿಖಾ ಪತ್ರ ಸಂಖ್ಯೆ:01/2020-21, ದಿನಾಂಕ: 15.02.2021ರಂದು ಜಾರಿಮಾಡಿ ಕೋರಲಾಗಿರುತ್ತದೆ. ಆದರೆ ಚಟುವಟಿಕೆವಾರು ವಾರ್ಷಿಕ ಕ್ರಿಯಾ ಯೋಜನೆಯ ಪ್ರತಿಯನ್ನು ಪರಿಶೀಲನೆಗೆ ಒದಗಿಸಿರುವುದಿಲ್ಲ. ಕ್ರಿಯಾಯೋಜನೆಯು ವಾರ್ಷಿಕ ಗುರಿಯ ಮುನ್ನೋಟವಾಗಿದ್ದು, ಪ್ರಗತಿ ಸಾಧಿಸಲು ಮೂಲ ದಾಖಲೆಯಾಗಿದೆ. ಕ್ರಿಯಾ ಯೋಜನೆಯ ಅನುಮೋದನೆಯಿಲ್ಲದೆ ಆಯವ್ಯಯ ಪ್ರಕಾರ ಕಾರ್ಯಕ್ರಮಗಳನ್ನು ಮಂಡಳಿಯ ಸಭೆಯ ಅನುಮೋದನೆ ಮೇರೆಗೆ ಅನುಷ್ಠಾನಗೊಳಿಸಲಾಗಿದೆ. ಇನ್ನು ಮುಂದೆ ವಾರ್ಷಿಕ ಕ್ರಿಯಾ ಯೋಜನೆ ಸಿದ್ದಪಡಿಸಿ ಅನುಮೋದನೆ ಪಡೆದು ಮಾಹೆವಾರು ಗುರಿ ನಿಗದಿಪಡಿಸಿ ನಿಶ್ಚಿತ ಕಾಲದಲ್ಲಿ ಪ್ರಗತಿ ಸಾಧಿಸಲು ಕ್ರಮವಹಿಸಬೇಕೆಂದು ಲೆಕ್ಕತನಿಖೆಯಲ್ಲಿ ಅಭಿಪ್ರಾಯಿಸಿದೆ.

**37. ಅನ್ಯ ಕಾರ್ಯ ನಿಮಿತ್ತ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಮಂಡಳಿಯ ನೌಕರರ ಸೇವೆ ಕುರಿತು:–**

ಕಾರ್ಮಿಕ ಕಲ್ಯಾಣ ಮಂಡಳಿಯು ನಾಗರೀಕ ಸೇವಾ ಮತ್ತು ನೇಮಕಾತಿ ನಿಯಮಾವಳಿ (cadar and recruitment rules) ಯನ್ನು ಅಂತಿಮಗೊಳಿಸುವ ಮುನ್ನವೇ 109 ನೌಕರರನ್ನು ನೇಮಕಾತಿ ಮಾಡಿರುತ್ತದೆ. ಸದರಿ ಮಂಡಳಿಯ ಸೇವಾ ಮತ್ತು ನೇಮಕಾತಿ ನಿಯಮಾವಳಿಗಳನ್ನು (cadar and recruitment rules) 1994 ರಲ್ಲಿ ಅಂತಿಮಗೊಳಿಸಿರುತ್ತಾರೆ.

ಸರ್ಕಾರಿ ಆದೇಶ ಸಂಖ್ಯೆ ಕಾಇ11ಎಲ್ಇಟಿ04 ದಿನಾಂಕ 12.01.2014 ಅನ್ವಯ ಮುಚ್ಚಲಾದ ಕಲ್ಯಾಣ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿದ್ದ 21 ಜನ ಗ್ರೂಪ್ 'ಸಿ' ಮತ್ತು 36 ಜನ ಗ್ರೂಪ್ 'ಡಿ' ನೌಕರರನ್ನು ಕಾರ್ಮಿಕ ಇಲಾಖೆ, ಕಾರ್ಖಾನೆ ಮತ್ತು ಬಾಯ್ಲರ್ ಇಲಾಖೆಗಳಲ್ಲಿ ಸಹಾಯಕರನ್ನಾಗಿ ನೇಮಿಸಿಕೊಳ್ಳಲು ಹಾಗೂ ಅವರುಗಳಿಗೆ ಕಲ್ಯಾಣ ಮಂಡಳಿಯಿಂದಲೇ ವೇತನ ಮತ್ತು ಇತರೆ ಭತ್ಯೆಗಳನ್ನು ಪಾವತಿಸಲು ಅನುಮತಿಸಲಾಗಿದೆ. ಈ ರೀತಿ ಕಾರ್ಮಿಕ ಇಲಾಖೆಯಲ್ಲಿ ನಿಯೋಜನೆಗೊಂಡಿರುವ 57 ನೌಕರರಿಗೆ ಮಂಡಳಿ ವತಿಯಿಂದಲೇ ವೇತನ ಪಾವತಿಸಲಾಗುತ್ತಿದೆ. ಇದು ಮಂಡಳಿಗೆ ಆರ್ಥಿಕ ಹೊರೆಯೆಂದು ಲೆಕ್ಕ ತನಿಖೆಯಲ್ಲಿ ಅಭಿಪ್ರಾಯಿಸಿದೆ.

**38. ಕ್ರೀಡಾ ಚಟುವಟಿಕೆಗಳಿಗೆ ಧನ ಸಹಾಯ ನೀಡಿರುವುದರಲ್ಲಿ ಕಂಡುಬಂದಿರುವ ನ್ಯೂನತೆಗಳು:–**

ನೋಂದಾಯಿತ ಕಾರ್ಮಿಕ ಸಂಘಟನೆಗಳು ಕಲ್ಯಾಣ ಆಯುಕ್ತರ ಪೂರ್ವಾನುಮತಿಯೊಂದಿಗೆ ವಾರ್ಷಿಕ ಕ್ರೀಡಾ ಚಟುವಟಿಕೆ ಹಮ್ಮಿಕೊಂಡಲ್ಲಿ ರೂ.50000/–ಗಳ ವರೆಗೆ ಧನ ಸಹಾಯ ನೀಡಲಾಗುತ್ತದೆ. ಬೇರೆ ಯಾವುದೇ ಮೂಲದಿಂದ ಕ್ರೀಡಾ ಚಟುವಟಿಕೆಗಳಿಗೆ ಧನ ಸಹಾಯ ದೊರೆಯದಿದ್ದಲ್ಲಿ ಅಂತಹ ಉದ್ಯೋಗ ಸಂಸ್ಥೆಯು ಕಾರ್ಮಿಕರಿಗೆ ನಡೆಸುವ ವಾರ್ಷಿಕ ಕ್ರೀಡಾ ಚಟುವಟಿಕೆಗೆ ಧನ ಸಹಾಯ ನೀಡಲಾಗುವುದು. ಲೆಕ್ಕ ಪರಿಶೋಧನಾ ವೇಳೆಯಲ್ಲಿ ಈ ಸಂಬಂಧ ಕಡತಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿವೆ.

1. ಅರ್ಜಿಗಳ ವಹಿ ನಿರ್ವಹಿಸಿರುವುದಿಲ್ಲ.
2. ಫಲಾನುಭವಿಗಳು ಬೇರೆ ಮೂಲಗಳಿಂದ ಧನ ಸಹಾಯ ಪಡೆದಿಲ್ಲ ಎಂಬುವುದಕ್ಕೆ ಯಾವುದೇ ದಾಖಲೆಗಳು ಕಡತಗಳಲ್ಲಿ ಇರುವುದಿಲ್ಲ.
3. ಕಾರ್ಮಿಕ ಕಲ್ಯಾಣ ಮಂಡಳಿಯ ಸಹಯೋಗದಿಂದ ನಡೆದಿರುವ ಕ್ರೀಡಾ ಚಟುವಟಿಕೆಗಳ ಕುರಿತು ಬ್ಯಾನರ್ ಹಾಗೂ ಛಾಯಾ ಚಿತ್ರಗಳು ಇರುವುದಿಲ್ಲ.
4. ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಪತ್ರಿಕಾ ಪ್ರಕಟಣೆಗಳು ಕಡತಗಳಲ್ಲಿ ಇರುವುದಿಲ್ಲ.

ಪ್ರೋತ್ಸಾಸ ಧನ ನೀಡಿಕೆಯಲ್ಲಿ ಯಾವುದೇ ನ್ಯೂನತೆಗಳು ಲೋಪವಾಗದಂತೆ ಕಾರ್ಯನುಷ್ಠಾನಗೊಳಿಸಲು ತಿಳಿಸಿದೆ.

**39. ಕಾರ್ಮಿಕ ಕಲ್ಯಾಣ ಮಂಡಳಿ ಉದ್ದೇಶ ಮತ್ತು ಯೋಜನೆಗಳ ಅನುಷ್ಠಾನದಲ್ಲಿ ವಿಫಲವಾಗಿದ್ದು ಸುಧಾರಣೆಗೊಳಸುವ ಕುರಿತು :–**

ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿ ನಿಯಮ 1965ರಲ್ಲಿ ವಿಧಿತವಾದ ಕಾರ್ಮಿಕರ ಕಲ್ಯಾಣದ ಹಿತದೃಷ್ಠಿಯ ಸದುದ್ದೇಶ ಹೊಂದಿದ್ದು ಅನುಷ್ಟಾನಗೊಲಿಸುವಲ್ಲಿ ಕೆಲವು ವೈಫಲ್ಯಗಳು ಕಂಡುಬಂದಿದ್ದು ಇವುಗಳನ್ನು ಸರಿಪಡಿಸಿಕೊಂಡು ಪರಿಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಅನುಷ್ಟಾನಗೊಳಿಸಲು ಕ್ರಮವಹಿಸಲು ಸೂಚಿಸಿದೆ.

1. ಹಣಕಾಸು ನಿರ್ವಹಣೆ ಮತ್ತು ಅನುದಾನ ಸದ್ಬಳಕೆ ಬಗ್ಗೆ ಪೂರ್ಣ ಪ್ರಮಾಣದಲ್ಲಿ ಜವಾಬ್ದಾರಿ ವಹಿಸಬೇಕಾಗಿದೆ.
2. ಮಂಡಳಿಯ ಪ್ರಮುಖ ಆಶಯಗಳನ್ನು ಈಡೇರಿಸುವಲ್ಲಿ ಮತ್ತು ಅನುದಾನವನ್ನು ಪೂರ್ಣವಾಗಿ ವೆಚ್ಚ ಮಾಡುವಲ್ಲಿ ಸಫಲವಾಗಿರುವುದಿಲ್ಲ.
3. ಮಂಡಳಿಯ ಮೂಲ ಉದ್ದೇಶ ಈಡೇರಿಕೆ ದೃಷ್ಠಿಯಿಂದ ವಿವರವಾದ ವಾರ್ಷಿಕ ಚಟುವಟಿಕೆವಾರು ಕ್ರಿಯಾ ಯೋಜನೆ ರೂಪಿಸಲು ಕ್ರಮವಹಿಸಬೇಕಾಗಿದೆ.
4. ವರ್ಗೀಕೃತ ಜಮಾ ಮತ್ತು ಖರ್ಚಿನ ವಹಿ ಹಾಗೂ ತಃಖ್ತೆಗಳನ್ನು ಕ್ರಮ ಬದ್ಧವಾಗಿ ನಿರ್ವಹಿಸುವುದು.

5. ವಂತಿಕೆ ಸಂಬಂಧಿಸಿದಂತೆ ವರ್ಷಾಂತ್ಯಕ್ಕೆ ಒಟ್ಟಾರೆ ಸ್ವೀಕೃತವಾದ ಚೆಕ್‌ಗಳ ಮಾಹಿತಿಗಳನ್ನು ವಂತಿಕೆ ವಹಿಯಲ್ಲಿ ನಮೂದಿಸಿರುವುದಿಲ್ಲ. ವಂತಿಕೆ ಸಂಗ್ರಹಣಾ ವಹಿಯನ್ನು ನಿರ್ವಹಿಸಲು ಕ್ರಮವಹಿಸುವುದು.

**40. ಸಾಮಾನ್ಯ ಅಭಿಪ್ರಾಯ :-**

1. ಲೆಕ್ಕ ಪತ್ರಗಳ ನಿರ್ವಹಣೆಯಲ್ಲಿ ಇನ್ನೂ ಹೆಚ್ಚಿನ ಸುಧಾರಣೆ ಅಗತ್ಯವಾಗಿರುತ್ತದೆ.
2. ಲೆಕ್ಕ ಸಮನ್ವಯ ಮಾಡದಿರುವುದು ಪ್ರಮುಖ ನ್ಯೂನತೆಯಾಗಿರುತ್ತದೆ.
3. ಜಮಾ ಮತ್ತು ಖರ್ಚಿನ ವರ್ಗೀಕೃತ ವಹಿಯನ್ನು ನಿರ್ವಹಿಸದಿರುವುದು.
4. ವಂತಿಗೆ ಡಿಸಿಬಿ ವಹಿ ನಿರ್ವಹಿಸದಿರುವುದು.

ಇವು ಪ್ರಮುಖ ನ್ಯೂನತೆಯಾಗಿದ್ದು ಮೇಲಿನ ನ್ಯೂನತೆಗಳು ಮರುಕಳಿಸದಂತೆ ನಿಯಮಾನುಸಾರ ಅಗತ್ಯ ಕ್ರಮಕೈಗೊಂಡು ಸರಿಪಡಿಸಿಕೊಳ್ಳಲು ಸೂಚಿಸಿದೆ. ಚಾಲ್ತಿಯಲ್ಲಿರುವ ಎಲ್ಲಾ ಖಾತೆಗಳಿಗೂ ಪ್ರತ್ಯೇಕವಾದ ನಗದು ವಹಿ ನಿರ್ವಹಿಸಿ, ಮಾಹೆಯಾನ ಬ್ಯಾಂಕ್‌ನ ಅಖೈರು ಶಿಲ್ಕುನೊಂದಿಗೆ ಲೆಕ್ಕ ಸಮನ್ವಯಗೊಳಿಸಲು ಸೂಚಿಸಿದೆ.

**ಉಪನಿರ್ದೇಶಕರು**
**ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,**
**ಬೆಂಗಳೂರು.**